# KARNATAKA

## Summary

- **Antyodaya Anna Yojana**
  Extended the benefits of AAY (Food Grains) under Targeted Public Distribution System to People Living with HIV in subsidized price.
- **Children Affected By AIDS**
  Foster care benefits for orphan children. Financial assistance of Rs. 750/- per month per child.
- **Travel Concession to PLHIV**
  50% travel concession in railways to PLHIV
- **Free Higher Education and Scholarship**
  Scholarship benefits to Children infected and affected by HIV/AIDS for higher education
- **Free Treatment**
  Free treatment for PLHIV
- **Rajiv Gandhi Housing**
  Prioritizes People Living with HIV to extend the benefits of Rajiv Gandhi Housing benefit.

E-mail: ksapspdp@gmail.com
Tel: 080- 2220 1436
080- 2220 1439
Fax: 080- 2220 1435

Department of Health & Family Welfare

# KARNATAKA STATE AIDS PREVENTION SOCIETY

No. 4/13-1, Crescent Road, High Grounds, Bangalore – 560001.

KSAPS/TI/105 /2010-2011 Dated: 13 December, 2010.

## ಕಛೇರಿ ಆದೇಶ

ವಿಷಯ : ಹೆಚ್‌ಐವಿ/ಏಡ್ಸ್ ಸೋಂಕಿತರಿಗೆ ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ ಪಡಿತರ ಚೀಟಿ ವಿತರಿಸುವ ಬಗ್ಗೆ.

ಉಲ್ಲೇಖ : 1. ಕೇಂದ್ರ ಸರ್ಕಾರ ಪತ್ರದ ಸಂಖ್ಯೆ ನಂ 13(15) 2009- PD III Dated 3-6-2009.
From Lalith Chauhan under Secretary Consumer Affiars & public discrimination.
2 . ಕರ್ನಾಟಕ ರಾಜ್ಯ ಸರ್ಕಾರ ಪತ್ರದ ಸಂಖ್ಯೆ ಉ.ನಿ (ಕೋ) ಡಿ.ಆರ್. ಎ/59/2009-10 ದಿನಾಂಕ 18-10-2010.ಉಪನಿರ್ದೇಶಕರು ಆಹಾರ ಮತ್ತು ನಾಗರಿಕ ಸರಬರಾಜು ಇವರಿಂದ.

ಮೇಲ್ಕಂಡ ಉಲ್ಲೇಖದಲ್ಲಿ ಸಮೂದಿಸಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪತ್ರವನ್ನು ಈ ಸುತ್ತೋಲೆಯಲ್ಲಿ ಲಗತ್ತಿಸಲಾಗಿದೆ. ಮೇಲ್ಕಂಡ ಪತ್ರಗಳ ಅನ್ವಯ ಹೆಚ್‌ಐವಿ/ಏಡ್ಸ್ ಸೋಂಕಿತರಿಗೆ ಅಂತ್ಯೋದಯ ಅನ್ನ ಪಡಿತರ ಚೀಟಿಯನ್ನು ನೀಡಲು ಶೀಘ್ರ ಕ್ರಮ ಜರುಗಿಸಬೇಕಾಗಿದೆ. ಈ ಬಗ್ಗೆ ಕೈಗೊಂಡ ಕ್ರಮ ಹಾಗೂ ವಿತರಿಸಲಾಗಿರುವ ಪಡಿತರ ಚೀಟಿಗಳ ಸಂಖ್ಯೆ ಒಳಗೊಂಡಂತೆ ಮಾಹೆಯಾನ ವರದಿಯನ್ನು ಯೋಜನಾ ನಿರ್ದೇಶಕರು ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ ಇವರಿಗೆ ತಪ್ಪದೇ ಸಲ್ಲಿಸಬೇಕು.

ಎಲ್ಲಾ DAPCU ಅಧಿಕಾರಿಗಳು ಸಂಬಂಧಪಟ್ಟ ಐಸಿಟಿಸಿಯಲ್ಲಿ ಗುರುತಿಸಿರುವ ಹೆಚ್‌ಐವಿ ಸೋಂಕಿತರ ಪಟ್ಟಿಯನ್ನು ಹಾಗೂ ಎಆರ್‌ಟಿ ಕೇಂದ್ರಗಳಲ್ಲಿ ನೋಂದಣಿಯಾಗಿರುವ ಹೆಚ್‌ಐವಿ ಸೋಂಕಿತರ ಪಟ್ಟಿಯನ್ನು ತಕ್ಷಣವೇ DHO ರವರಿಗೆ ತಲುಪಿಸಿ. DHO ರವರ ಮೂಲಕ ಕೂಡಲೇ ಅಂತ್ಯೋದಯ ಅನ್ನ ಪಡಿತರ ಚೀಟಿಯನ್ನು ಸೋಂಕಿತರು ಪಡೆಯಲು ಕ್ರಮ ಜರುಗಿಸಬೇಕೆಂದು ಆದೇಶಿಸಲಾಗಿದೆ.

ಎಲ್ಲಾ ART ಮತ್ತು Link ART ವೈದ್ಯಾಧಿಕಾರಿಗಳು ಅಂತ್ಯೋದಯ ಪಡಿತರ ಚೀಟಿ ಇಲ್ಲದೆ ಇರುವ ಹೆಚ್‌ಐವಿ ಸೋಂಕಿತರ ಪಟ್ಟಿಯನ್ನು ಕೂಡಲೆ DAPCU ಅಧಿಕಾರಿಗಳ ಮೂಲಕ ಜಿಲ್ಲಾ ವೈದ್ಯಾಧಿಕಾರಿಗಳಿಗೆ ತಲುಪಿಸಲು ಆದೇಶಿಸಲಾಗಿದೆ.

ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಬೆಂಗಳೂರು-01

ಗೆ,
1. ಎಲ್ಲಾ DAPCU ಅಧಿಕಾರಿಗಳಿಗೆ ತುರ್ತು ಕ್ರಮಕ್ಕಾಗಿ.
2. ಎಲ್ಲಾ ಜಿಲ್ಲಾ ಮೇಲ್ವಿಚಾರಕರುಗಳಿಗೆ ತುರ್ತು ಕ್ರಮಕ್ಕಾಗಿ.
3. ಎಲ್ಲಾ ART ವೈದ್ಯಾಧಿಕಾರಿಗಳಿಗೆ ತುರ್ತು ಕ್ರಮಕ್ಕಾಗಿ.

ಪ್ರತಿಯನ್ನು
1. ಎಲ್ಲಾ ಜಿಲ್ಲಾ ವೈದ್ಯಾಧಿಕಾರಿಗಳಿಗೆ ಮಾಹಿತಿಗಾಗಿ.
2. ಎಲ್ಲಾ ಜಿಲ್ಲಾ ಹೆಚ್‌ಐವಿ ಸೋಂಕಿತ ನೆಟ್ ವರ್ಕ್‌ಗಳಿಗೆ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ.

ಕರ್ನಾಟಕ ಸರ್ಕಾರ

ಸಂಖ್ಯೆ/ಉನಿ(ಕೇ): ಪಿಆರ್ಎ/59/2009-10

ಉಪ ನಿರ್ದೇಶಕರು
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ, ಕೇಂದ್ರಾಲಯ
ಬೆಂಗಳೂರು. ದಿನಾಂಕ: 18/10/2010.

ಗೆ,

ಜಿಲ್ಲಾ ವ್ಯವಸ್ಥಾಧಿಕಾರಿಗಳು
ಹೆಚ್.ಐ.ವಿ/ಏಡ್ಸ್ ಸಂಸ್ಥೆ
ಗಾಲ್ಫ್ ಕ್ಲಬ್ ಎದುರು
ಕುಮಾರಕೃಪ ರಸ್ತೆ
ಬೆಂಗಳೂರು.

ಮಾನ್ಯರೆ,

ವಿಷಯ: ಹೆಚ್.ಐ.ವಿ/ಏಡ್ಸ್ ಪೀಡಿತರಿಗೆ ಅಂತ್ಯೋದಯ ಅನ್ನ ಯೋಜನೆಯಡಿ ಪಡಿತರ ಚೀಟಿ ವಿತರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಪರ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಇವರ ಅಸ ಪತ್ರ ಸಂಖ್ಯೆ:ಆನಾಸ/86/ಡಿ.ಆರ್.ಎ/2010 ದಿನಾಂಕ: 19.07.2010 ಮತ್ತು 17.09.2010.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಹೆಚ್.ಐ.ವಿ/ಏಡ್ಸ್ ಪೀಡಿತರ ಪಟ್ಟಿಯನ್ನು ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾ ವೈದ್ಯಾಧಿಕಾರಿಗಳಿಂದ(ಡಿ.ಹೆಚ್.ಓ) ಪಡೆದು, ಅವರುಗಳಿಗೆ ಅಂತ್ಯೋದಯ ಅನ್ನ ಯೋಜನೆಯಡಿ ಪಡಿತರ ಚೀಟಿ ನೀಡಲಾಗಿದೆಯೇ ಎಂದು ತಿಳಿದು, ನೀಡದೇ ಇರುವ ಕುಟುಂಬಗಳಿಗೆ ಅವರು ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹತೆ ಹೊಂದಿದ್ದರೆ ಕೂಡಲೇ ಅಂತ್ಯೋದಯ ಅನ್ನ ಯೋಜನೆಯಡಿ ಪಡಿತರ ಚೀಟಿ ನೀಡಲು ಕ್ರಮ ಕೈಗೊಂಡು ಪಾಲನಾ ವರದಿ ಸಲ್ಲಿಸುವಂತೆ ಹಾಗೂ ಇದೇ ಪ್ರಕ್ರಿಯೆಯನ್ನು ಮುಂದಿನ ದಿನಗಳಲ್ಲಿ ಮುಂದುವರೆಸಿ ಹೆಚ್.ಐ.ವಿ/ಏಡ್ಸ್ ಪೀಡಿತರಿಗೆ ಅಂತ್ಯೋದಯ ಅನ್ನ ಯೋಜನೆಯಡಿ ನೀಡಲಾದ ಪಡಿತರ ಚೀಟಿಗಳ ಸಂಖ್ಯೆಯ ಮಾಹಿತಿಯನ್ನು ಸಂಗ್ರಹಿಸಿ ಪ್ರತಿ ತಿಂಗಳು ಪ್ರತ್ಯೇಕವಾಗಿ ಸರ್ಕಾರಕ್ಕೆ ವರದಿ ಮಾಡುವಂತೆ ಕೋರಿರುತ್ತಾರೆ.

ಈ ಮೇಲ್ಕಂಡಂತೆ ಉಲ್ಲೇಖಿದ ಪತ್ರದಲ್ಲಿ ನಮೂದಿಸಿರುವಂತೆ ಸದರಿ ಪ್ರಕರಣವು ತುರ್ತು ಸ್ವರೂಪದ್ದಾಗಿದ್ದು, ಕೇಂದ್ರ ಸರ್ಕಾರಕ್ಕೆ ರಾಜ್ಯವು ಪಾಲನಾ ವರದಿ ಸಲ್ಲಿಸಬೇಕಾಗಿರುತ್ತದೆಂದು ಸಹ ನಮೂದಿಸಿರುತ್ತಾರೆ. ಅದರಂತೆ ಕೋರಿರುವ ಮಾಹಿತಿಯ ಪ್ರಕಾರ ಜರೂರು ಮಾಹಿತಿಯನ್ನು ಈ ಕಛೇರಿಗೆ ಕಳುಹಿಸುವಂತೆ ಕೋರುತ್ತಾ ಉಲ್ಲೇಖಿದ ಪತ್ರದೊಂದಿಗೆ ಲಗತ್ತಿಸಿರುವ ಭಾರತ ಸರ್ಕಾರದ ಪತ್ರ ಸಂಖ್ಯೆ: 13(15):2009-ಓ.ಡಿ-III, ದಿನಾಂಕ: 13.06.2009 ಮತ್ತು ಸರ್ಕಾರದ ಪತ್ರ ದಿನಾಂಕ: 03.10.2009ರ ಅಡಕದ ಪತ್ರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ತಮ್ಮ ವಿಶ್ವಾಸಿ,

ಉಪನಿರ್ದೇಶಕರು,
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ, ಕೇಂದ್ರಾಲಯ
ಬೆಂಗಳೂರು.

133

IMMEDIATE
BY SPEED POST

No.13(15)/2009-PD-III
Government of India
Ministry of Consumer Affairs, Food and Public Distribution
Department of Food and Public Distribution

Krishi Bhavan, New Delhi
Dated 3rd June, 2009

To,

The Secretary,
Food & Civil Supplies Department,
(All State/UT Governments)

Subject: Extending the benefits of Antyodaya Anna Yojana (AAY) scheme under Targeted Public Distribution System (TPDS) to HIV positive persons – Regarding.

Sir,

I am directed to say that in order to make the TPDS more focused and targeted at the poorest of the poor, Antyodaya Anna Yojana was launched in December, 2000 for one crore families to be identified amongst the BPL families. Coverage under this scheme has been expanded thrice since then i.e. during 2003-04, 2004-05 and 2005-06, vide communications No.6(4)/2003/PD-I dated 5th June, 2003, No.6(1)/2004/PD-I dated 3rd August, 2004 and No.6(5)/2005/PD-I dated 12th May, 2005, respectively, covering additional 50 lakh households each time. As per these instructions, the Antyodaya Anna Yojana (AAY) families were to be identified from the BPL families in each State. In the said guidelines it has, inter-alia, been laid down specifically that widows or terminally ill persons or disabled persons with no assured means of subsistence or family/societal support would be eligible for coverage under AAY, provided they are in the BPL list of the concerned State/UT.

2. As the State/UT Governments may be aware, a PIL has been filed by the social activists and Persons Living with HIV/AIDS (PLHA) in the Hon'ble Supreme Court. In this regard relevant extracts of Order dated 26.3.2009, passed by the Supreme Court in Writ Petition (Civil) No.535/1998, are given below :-

"Learned counsel appearing for the petitioner stated that many of these patients are living Below the Poverty Line and so they should be provided with 'Antyodaya Anna Yojana Card' to get food supply from PDS stores and so also some of these patients have to visit the distant hospitals regularly and therefore they should be issued free passes in public transport system. We hope that HIV/AIDS patients would get the proper line of treatment".

3. Keeping in view the above order of the Hon'ble Supreme Court and provisions in the existing AAY guidelines as in para 1 above, all State/UT Governments are requested to review the existing list of AAY families in their respective States/UTs, delete ineligible AAY families therefrom and include all eligible BPL families of HIV positive persons in the AAY list on priority, against the criteria mentioned in para 2(b) and 2(c) of the guidelines for identification of AAY families under Antyodaya Anna Yojana, circulated vide D.O. letter No.6(5)/2005/PD-I dated 12th May, 2005, within respective ceilings on numbers of the AAY families communicated by this Department.

Yours faithfully,

( Lalit Chauhan )
Under Secretary to the Government of India
Tele No.011-23388571

ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ

ಸಂ:ಐಸಿಪಿಎಸ್:ವಿ.ಪಾ..ಯೋ.:ತರಬೇತಿ:01:2012-13

C/o. ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ ನಿರ್ದೇಶನಾಲಯ
ಬೆಂಗಳೂರು – 01.
ದಿನಾಂಕ : 18-04-2013

: ಸುತ್ತೋಲೆ :

ವಿಷಂಯ : ವಿಶೇಷ ಪಾಲನಾ ಯೋಜನೆ ಅನುಷ್ಠಾನದ ಕುರಿತು.
ಉಲ್ಲೇಖ : 1) ಸರ್ಕಾರದ ಆದೇಶ ಸಂ:ಮಮಇ:84:ಮಭಾಬ 2009 ಬೆಂಗಳೂರು, ದಿನಾಂಕ: 29-3-2010.
2) ಸರ್ಕಾರದ ಆದೇಶ ಸಂ:ಮಮಇ:03:ಮಭಾಬ 2012 ಬೆಂಗಳೂರು, ದಿನಾಂಕ: 20-7-2012.

******

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಉಲ್ಲೇಖ (1)ರ ಆದೇಶದನ್ವಯ ವಿಶೇಷ ಪಾಲನಾ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಸದರಿ ಆದೇಶದನ್ವಯ ಯೋಜನೆಯ ಅನುಷ್ಠಾನವನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ ಕಾರ್ಯಗತಗೊಳಿಸಲಾಗುತ್ತಿದೆ.

ಉಲ್ಲೇಖ (2) ರ ಆದೇಶದನ್ವಯ ಈ ಯೋಜನೆಯನ್ನು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು ಇದರ ಮೂಲಕ ಅನುಷ್ಠಾನಗೊಳಿಸಲು ಆದೇಶ ಸೂಚಿಲಾಗಿರುತ್ತದೆ. ಅದರಂತೆ ಜಿಲ್ಲೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಜವಾಬ್ದಾರಿಯನ್ನು ವಹಿಸಲಾಗಿದೆ.

ಕಳೆದ ಎರಡು ವರ್ಷಗಳಲ್ಲಿ ಈ ಯೋಜನೆಯಡಿ ಉಪ ನಿರ್ದೇಶಕರಿಗೆ ಬಿಡುಗಡೆಗೊಳಿಸಲಾದ ಅನುದಾನಕ್ಕೆ ಸಂಬಂಧಿಸಿದಂತೆ ಲೆಕ್ಕ ಪತ್ರಗಳನ್ನು ಉಪ ನಿರ್ದೇಶಕರು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನಿರ್ವಹಿಸುತ್ತಿದ್ದು ಸದರಿ ಕಛೇರಿಯಲ್ಲೇ ಇರತಕ್ಕದ್ದು. ಈ ಯೋಜನೆಯಡಿ ಅನುದಾನ ಬಿಡುಗಡೆಗೊಳಿಸಿದ ಮಕ್ಕಳ ಹೆಸರು, ವಿಳಾಸಗಳ ವಿವರಗಳ ಪಟ್ಟಿಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ನೀಡುವುದು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಹಾಲಿ ಹಣ ಬಿಡುಗಡೆ ಗೊಳಿಸಿರುವ ಮಕ್ಕಳ ವಿವರಗಳು ಹಾಗೂ ಆಡಳಿತ ಮಂಜೂರಾತಿಯಲ್ಲಿ ನೀಡಿರುವ ಮಕ್ಕಳ ವಿವರಗಳೊಂದಿಗೆ ಪರಿಶೀಲಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವುದು. ಅನುಷ್ಠಾನ ಮಾರ್ಗಸೂಚಿಯನ್ನು ಅನುಬಂಧದಲ್ಲಿ ಮತ್ತೊಮ್ಮೆ ನೀಡಲಾಗಿರುತ್ತದೆ.

Scan & send to all Cent

ಸದಸ್ಯ ಕಾರ್ಯದರ್ಶಿಯವರಿಂದ ಅನುಮೋದಿಸಲ್ಪಟ್ಟಿದೆ.

I/C – CST

ಸಹಿ : ಗುರ್ನೀತ್ ತೇಜ್
ಸದಸ್ಯ ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
ಹಾಗು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ ಇಲಾಖೆ, ಬೆಂಗಳೂರು.

KSAPS
No : 13262
Date : 02-05-2013

PD KSAPS
No. 129
Date 03/05/2013

ಪ್ರತಿಯನ್ನು :
1) ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರಿಗೆ ಮಾಹಿತಿಗಾಗಿ.
2) ಎಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ.

Desktop/Vijaya/Vijaya Laxmi/Letters

3) ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಇವರಿಗೆ ಸೂಕ್ತ ಕ್ರಮಕ್ಕಾಗಿ.
4) ಯೋಜನಾ ನಿರ್ದೇಶಕರು, ಜಿಲ್ಲಾ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ನಂ.4/13-1, ಕ್ರೆಸೆಂಟ್ ರೋಡ್, ಹೈಗ್ರೌಂಡ್ಸ್, ಬೆಂಗಳೂರು ಇವರಿಗೆ ಮಾಹಿತಿಗಾಗಿ.
5) ಕರ್ನಾಟಕ ಆರೋಗ್ಯ ಸಂವರ್ಧನಾ ಟ್ರಸ್ಟ್, ಬೆಂಗಳೂರು. ಇವರಿಗೆ ಮಾಹಿತಿಗಾಗಿ.

ಸದಸ್ಯ ಕಾರ್ಯದರ್ಶಿಗಳ ಪರವಾಗಿ,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
ಹಾಗು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ ಇಲಾಖೆ, ಬೆಂಗಳೂರು.

Desktop/Vijaya/Vijaya Laxmi/Letters

ಅನುಷ್ಠಾನ ಮಾರ್ಗಸೂಚಿ:

(1) ವಿಶೇಷ ಪಾಲನಾ ಯೋಜನೆ ಅನುಷ್ಠಾನ ಕುರಿತು ದಿ:27-12-2012 ಶಿವಮೊಗ್ಗ, 29-12-2012 ಹಾಸನ, 4-12-12 ಗುಲ್ಬರ್ಗ, 12-12-12 ಧಾರವಾಡ, 11-12-12 ಬಾಗಲಕೋಟೆ ಹಾಗೂ ಕ್ರಮವಾಗಿ ಬೆಂಗಳೂರು ಶಿವಮೊಗ್ಗ, ಹಾಸನ, ಗುಲ್ಬರ್ಗ, ಧಾರವಾಡ, ಬಾಗಲಕೋಟೆ ಜಿಲ್ಲೆಗಳಲ್ಲಿ ಸಂಬಂಧಪಟ್ಟ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಸಮಾಜ ಕಾರ್ಯಕರ್ತರು, ART ವೈದ್ಯಾಧಿಕಾರಿಗಳು, ಕೇರ್ ಕೋ ಆರ್ಡಿನೇಟರ್, ಸಮಾಲೋಚಕರು ಹಾಗೂ ಡ್ರಾಪ್ ಇನ್ ಸೆಂಟರ್ ನ ಒಬ್ಬ ಸಮಾಲೋಚಕರುಗಳಿಗೆ ಯೋಜನೆಯ ಅನುಷ್ಠಾನದ ಕುರಿತು ತರಬೇತಿ ನೀಡಲಾಗಿರುತ್ತದೆ. ಸದರಿ ಸಭೆಯಲ್ಲಿ ತಿಳಿಸಿರುವ ವಿಷಯಗಳನ್ನು ಮತ್ತೊಮ್ಮೆ ಗಮನಕ್ಕೆ ತರುತ್ತಾ ಕ್ರಮಬದ್ಧವಾಗಿ ಯೋಜನೆಯನ್ನು ಅನುಷ್ಠಾನ ಗೊಳಿಸುವುದು.

(2) ಆಡಳಿತ ಮಂಜೂರಾತಿಯಲ್ಲಿ ನೀಡಿರುವ ಮಕ್ಕಳ ಸಂಖ್ಯೆಗೆ ಸಂಬಂಧಿಸಿದಂತೆ ಪ್ರತಿ ಮಗುವಿಗೆ ಪ್ರತ್ಯೇಕ ಕೇಸ್ ಫೈಲ್‌ಗಳನ್ನು ನಿರ್ವಹಿಸುವುದು. ಒಂದು ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಮಕ್ಕಳಿದ್ದರೂ ಎಲ್ಲಾ ಮಕ್ಕಳ ಕೇಸ್ ಫೈಲ್‌ನ್ನು ಒಂದೇ ಕಡೆ ಟ್ಯಾಗ್ ಮಾಡುವುದು.

(3) ಪ್ರತಿ ಮಗುವಿನ ತಂದೆ ಅಥವಾ ತಾಯಿ ಅಥವಾ ಸ್ವತಃ ಮಗು ನೋಂದಣಿಯಾಗಿರುವುದು ಕಡ್ಡಾಯವಾತರುತ್ತದೆ ಹೀಗಾಗಿ ನೋದಣಿ ಸಂಖ್ಯೆಯನ್ನು ART ವೈದ್ಯಾಧಿಕಾರಿಗಳಿಂದ ಧೃಢೀಕರಿಸಿ ಕೇಸ್ ಫೈಲ್‌ನಲ್ಲಿ ಹಾಕಿಕೊಳ್ಳುವುದು.

(4) ಪ್ರತಿ ಕುಟುಂಬವು ವಿಶೇಷ ಪಾಲನಾ ಯೋಜನೆಯಡಿ ಸೌಲಭ್ಯವನ್ನು ಪಡೆಯಲು ಹಾಗೂ ತಮ್ಮ ಬಗೆಗಿನ ವಿವರವನ್ನು ಗ್ರಾಮ ಆರೋಗ್ಯ ಸಮಿತಿ ಮುಂದೆ ಮಂಡಿಸುವ ಬಗ್ಗೆ ಒಪ್ಪಿಗೆ ಪತ್ರವನ್ನು ಕಡ್ಡಾಯವಾಗಿ ಕೇಸ್ ಫೈಲ್‌ನಲ್ಲಿ ಹಾಕತಕ್ಕದ್ದು. (ಒಪ್ಪಿಗೆ ಪತ್ರದ ಮಾದರಿ ಕಳುಹಿಸಿದೆ) ನಗರ ಪ್ರದೇಶದ ಪ್ರಕರಣಗಳಿದ್ದಲ್ಲಿ ಮಾಹಿತಿಯನ್ನು ವಾರ್ಡ್‌ಮಟ್ಟದ ಸಮಿತಿ ಮುಂದೆ ಮಂಡಿಸಲಾಗುವುದೆಂದು ತಿಳಿಸುವುದು. ವಾರ್ಡ್ ಸಮಿತಿ ಬಗ್ಗೆ ಮಾಹಿತಿ ನೀಡಲಾಗುವುದು.

(5) ART ಕೇಂದ್ರದಲ್ಲಿ ನೋಂದಾಯಿಸಲ್ಪಟ್ಟ ಹಾಗೂ ಒಪ್ಪಿಗೆ ಪತ್ರ ಪಡೆದಿರುವ ಕುಟುಂಬಗಳ ಸಾಮಾಜಿಕ ಆರ್ಥಿಕ ಸಮೀಕ್ಷೆಯನ್ನು ಒದಗಿಸುವ ನಮೂನೆಯಲ್ಲಿ ಪಡೆಯವುದು. (ಮಾದರಿ ಕಳುಹಿಸಿದೆ) ಅಗತ್ಯ ನಮೂನೆಗಳನ್ನು ಸ್ಥಳೀಯವಾಗಿ ಮುದ್ರಿಸಿಕೊಳ್ಳುವುದು.

(6) ಸದರಿ ಕುಟುಂಬಗಳನ್ನು ಮೊದಲ ಬಾರಿ ART ಕೇಂದ್ರದಲ್ಲಿ ವೈದ್ಯಾಧಿಕಾರಿಗಳು ಅಥವಾ ಕೇರ್ ಕೋ ಆರ್ಡಿನೇಟರ್ ಅಥವಾ ಸಮಾಲೋಚಕರ ಮೂಲಕ ಪರಿಚಯಿಸಿಕೊಳ್ಳತಕ್ಕದ್ದು. ಸಮೀಕ್ಷೆಯಲ್ಲಿನ ಹೆಚ್ಚಿನ ವಿವರಗಳನ್ನು ART ಕೇಂದ್ರದಲ್ಲಿ ಕುಟುಂಬದವರೊಡನೆ ಚರ್ಚಿಸಿ ದಾಖಲಿಸಿಕೊಳ್ಳುವುದು. ಹಾಗು ಮನೆ ಭೇಟಿ ಬರುವ ಬಗ್ಗೆ ತಿಳಿಸುವುದು.

(7) ಸಾಮಾಜಿಕ ಸಮೀಕ್ಷೆ ಮಾಹಿತಿ ಪಡೆದ ನಂತರ ಒಂದು ಬಾರಿ ಸದರಿ ವಿಳಾಸಕ್ಕೆ ಭೇಟಿ ನೀಡಿ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿ ಮಂಜೂರು ಮಾಡಬೇಕಾದ ಅನುದಾನದ ನಿರ್ಧರಣೆಯನ್ನು ಮಾಡತಕ್ಕದ್ದು.

(8) ಒಂದು ಕುಟುಂಬದಲ್ಲಿ ಸೋಂಕಿತ ತಂದೆ ತಾಯಿಯರಿದ್ದು ಮಕ್ಕಳು ಬಾಧಿತರಾಗಿದ್ದಲ್ಲಿ ಅಂತಹ ಕುಟುಂಬಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು. ಒಂದಕ್ಕಿಂತ ಹೆಚ್ಚು ಬಾಧಿತ ಮಕ್ಕಳಿದ್ದಲ್ಲಿ ಒಂದು ಮಗುವಿಗೆ ಸಹಾಯ ಧನ ಒದಗಿಸುವುದು.

(9) ಒಂದಕ್ಕಿಂತ ಹೆಚ್ಚು ಸೋಂಕಿತ ಮಕ್ಕಳಿದ್ದರೂ ಕೂಡ ಮನೆಯ ಆರ್ಥಿಕ ಪರಿಸ್ಥಿತಿ ತೃಪ್ತಿಕರವಾಗಿದ್ದಲ್ಲಿ ಒಂದು ಮಗುವಿಗೆ ಸೀಮಿತಗೊಳಿಸಬಹುದಾಗಿದೆ.

(10) ಒಂದೊಂದು ತಾಲ್ಲೂಕನ್ನು ಒಬ್ಬರಿಗೆ ಅಂದರೆ, ರಕ್ಷಣಾಧಿಕಾರಿಗಳು ಸಾಂಸ್ಥಿಕ, ರಕ್ಷಣಾಧಿಕಾರಿಗಳು ಅಸಾಂಸ್ಥಿಕ, ಇಬ್ಬರು ಸಮಾಜ ಕಾರ್ಯಕರ್ತರು, ಒಬ್ಬ ಸಮಾಲೋಚಕರು ಹಾಗು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ವಹಿಸಬಹುದಾಗಿದೆ. ತಾಲ್ಲೂಕಿನ ಸಂಖ್ಯೆ 6 ಕ್ಕಿಂತ ಹೆಚ್ಚಾಗಿದ್ದಲ್ಲಿ 2

Desktop/Vijaya/Vijaya Laxmi/Letters

ತಾಲ್ಲೂಕುಗಳನ್ನು ಒಬ್ಬರಿಗೆ ನೀಡುವುದು. ಇದರಿಂದ ಕ್ರಮ ಬದ್ಧ ಮೇಲ್ವಿಚಾರಣೆ ಮಾಡಲು ಸಾಧ್ಯವಾಗುತ್ತದೆ.

(11) ಪ್ರತಿ ಕುಟುಂಬದ ಪೋಷಕರು ಹಾಗು ಮಗುವಿನ ಬ್ಯಾಂಕ್ ಖಾತೆ ತೆಗೆಯಲು ಕುಟುಂಬಗಳಿಗೆ ಸೂಚನೆ ನೀಡುವುಧು. ಒಂದು ಕುಟುಂಬಕ್ಕೆ ಒಂದಕ್ಕಿಂತ ಹೆಚ್ಚು ಮಕ್ಕಳಿಗೆ ಸೌಲಭ್ಯ ಒದಗಿಸುವದು ಅನಿವಾರ್ಯವಾದಲ್ಲಿ ಒಂದೇ ಬ್ಯಾಂಕ್ ಖಾತೆ ಸಾಕು. ಮಂಜೂರಾದ ಮೊತ್ತವನ್ನು ಆರ್‌ಟಿಜಿಎಸ್ ಮೂಲಕ ಜಮಾ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವುದು

(12) ಪ್ರತಿ ಮಗುವಿಗೆ ಪ್ರಥಮ ಬಾರಿಗೆ ಮಂಜೂರಾತಿ ಆದೇಶ ಹೊರಡಿಸುವುದು. ನಂತರದ ವರ್ಷಗಳಲ್ಲಿ ನವೀಕರಣ ಆದೇಶ ಹೊರಡಿಸುವುದು. ಕನಿಷ್ಠ 3 ತಿಂಗಳಿಗೊಮ್ಮೆಯಾದರೂ ಮಗುವಿನ ಆರೋಗ್ಯ, ಶಾಲೆ ಮುಂದುವರಿಕೆ, ಮಗು ಎಆರ್‌ಟಿ ಮೇಲೆ ಇದ್ದಲ್ಲಿ ART Adeherence ಬಗ್ಗೆ ಅಂದರೆ ಎಆರ್‌ಟಿ ಕೇಂದ್ರಕ್ಕೆ ನಿಯಮಿತವಾಗಿ ಹಾಜರಾಗುತ್ತಿರುವ ಬಗ್ಗೆ, ನಿಗದಿತ ವೇಳೆಗಳಲ್ಲಿ ಆರೋಗ್ಯ ತಪಾಸಣೆ ರಕ್ತ ಪರೀಕ್ಷೆಗಳ ವರದಿ, ಮಗು ಮರಣ ಹೊಂದಿದ್ದಲ್ಲಿ, ಊರು ಬಿಟ್ಟಲ್ಲಿ ಮಾಹಿತಿಗಳನ್ನು ಪಡೆದು ಮಕ್ಕಳ ಕೇಸ್ ಫೈಲ್‌ನಲ್ಲಿ ದಾಖಲಿಸುವುದು.

(13) ಹೊಸ ಪ್ರಕರಣಗಳು ದಾಖಲಾದಲ್ಲಿ ಅಲ್ಲೂ ಕೂಡ ಮೇಲಿನ ಕ್ರಮಗಳನ್ನೇ ಅನುಸರಿಸುವುದು. ಕಡ್ಡಾಯವಾಗಿ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ, ಗ್ರಾಮ ಪಂಚಾಯಿತಿ, ತಾಲ್ಲೂಕು ಸಮಿತಿ, ಜಿಲ್ಲಾ ಸಮಿತಿ ಮುಂದೆ ಕಡ್ಡಾಯವಾಗಿ ತಂದು ಅನುಮೋದನೆ ಪಡೆಯುವುದು.

(14) ತಂದೆ ತಾಯಿ ಹೊಂದಿರುವ ಮಕ್ಕಳಿಗೆ ಮಾಸಿಕ ರೂ.650/- ಹಾಗೂ ವಾರ್ಷಿಕ ರೂ.500/- ಶಿಕ್ಷಣ ವೆಚ್ಚ (ಶಾಲೆಗೆ ಹೋಗುತ್ತಿದ್ದಲ್ಲಿ) ಮತ್ತು ಪೋಷಕರು ನೋಡಿಕೊಳ್ಳುತ್ತಿದ್ದಲ್ಲಿ ಮಾಸಿಕ ರೂ.750/- ಹಾಗೂ ವಾರ್ಷಿಕ ರೂ.500/- ಶಿಕ್ಷಣ ವೆಚ್ಚ (ಶಾಲೆಗೆ ಹೋಗುತ್ತಿದ್ದಲ್ಲಿ) ಮಂಜೂರು ಮಾಡಲು ಅವಕಾಶವಿದೆ. ಪೋಷಕರು ನೋಡಿಕೊಳ್ಳುತ್ತಿದ್ದಲ್ಲಿ ಖುದ್ದಾಗಿ ಮನೆ ಭೇಟಿ ಮಾಡಿ, ಸದರಿ ಪೋಷಕರ ವಿವರ ಹಾಗೂ ಸಾಮಾಜಿಕ ಗೃಹ ತನಿಖೆ ನಡೆಸಿ Fit Person CWC ಮೂಲಕ ಶಿಫಾರಸ್ಸು ಮಾಡುವ ಪ್ರಕ್ರಿಯೆ ಹಂತ ಹಂತವಾಗಿ ನಡೆಸುವುದು.

ವಿಶೇಷ ಪಾಲನಾ ಯೋಜನೆ ವಿಶಿಷ್ಠ ಕಾರ್ಯಕ್ರಮವಾಗಿದ್ದು ಅರ್ಜಿ ಹಿಡಿದು ಯಾರು ಬರುವುದಿಲ್ಲ. ಹೀಗಾಗಿ ಎಆರ್‌ಟಿ ಕೇಂದ್ರದ ನಿರಂತರ ಸಂಪರ್ಕ ಅತಿ ಅಗತ್ಯವಿರುತ್ತದೆ. ಹೊಸದಾಗಿ ನೋಂದಣಿಯಾದ ಪ್ರಕರಣಗಳಲ್ಲಿ ಕುಟುಂಬಕ್ಕೆ ಯೋಜನೆಯ ಬಗ್ಗೆ ತಿಳುವಳಿಕೆಯನ್ನು ಎಆರ್‌ಟಿ ಕೇಂದ್ರದ ಮೂಲಕ ಒದಗಿಸುವಂತೆ ತಿಳಿಸುವುದು. ನಂತರ ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸುವುದು.

ಸದಸ್ಯ ಕಾರ್ಯದರ್ಶಿಗಳ ಪರವಾಗಿ,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
ಹಾಗು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ ಇಲಾಖೆ, ಬೆಂಗಳೂರು.

Desktop/Vijaya/Vijaya Laxmi/Letters

.139

MOST IMMEDIATE
BUDGET INSTRUCTIONS

GOVERNMENT OF INDIA
MINISTRY OF RAILWAYS
(RAILWAY BOARD)

COMMERCIAL CIRCULAR NO. /8 OF 2008

No. TCII/2196/07/AIDS/Policy. New Delhi, dated 14 .03.08.

General Managers (Comml.),
All Indian Railways.

Sub: Grant of concession to AIDS patients for treatment at nominated ART (Anti Retroviral Therapy) Centres.

As announced by Hon'ble MR on 26.2.2008 in the Budget Speech for 2008-09, Ministry of Railways have decided to grant concession in train fares to AIDS patients, for treatment at nominated ART (Anti Retroviral Therapy) Centres (list enclosed) and return after treatment. The element of concession will be 50% in Second class only (and not Sleeper or any other class).

2. Concession will be admissible in basic Mail/Express fares only and not in other charges like reservation fee, superfast surcharge, development surcharge, etc., which shall be recovered in full as per existing rules. Concession will be granted directly by Station Masters on production of the certificate in prescribed form issued by Officer-in-charge of the concerned ART centre where the patient is to be treated or has been treated. Specimen copies of the prescribed Concession Certificates for outward and return journeys are enclosed. Concession will be admissible without any Minimum distance limit, subject to the distance restrictions otherwise applicable in individual Mail/Express trains. Concession will not be admissible in Rajdhani/Shatabdi/Jan Shatabdi/Garib Rath trains. This concession will be admissible subject to other conditions mentioned in rule 101 of IRCA Coaching Tariff No. 25 Part. I (Vol. II).

3. These instructions will come into effect on tickets issued from 1.4.2008.

4. Necessary instructions may be issued to all concerned immediately and suitable changes incorporated in PRS, manual ticketing system, SPTM, UTS, etc., wherever required, well in advance. Wide publicity through various media may be given at regular intervals. Zonal Railways may arrange to send specimen copies of the certificates to concerned ART centers situated in their Zones and also advise them about this concession. Health Departments of concerned State Governments may also be advised in this regard. This issues with the concurrence of Finance & Health Directorates of Ministry of Railways.
(Hindi version will follow.)

(Ravinesh Kumar)
Director Traffic Comml. (G),
Railway Board.

DA: As above.

No. TCII/2196/07/AIDS/Policy. New Delhi, dated 14 .03.08.

Copy forwarded to:

1. Dy. Comptroller & Auditor General of India (Railways), Room No.224, Rail Bhavan, New Delhi with 38 spares.
2. FA&CAOs, All Indian Railways.
3. Principal Director of Audit, All Indian Railways.

DA: 38 spares for item (1) only.

for Financial Commissioner/Railways.

R. & I Section 450

(6)



No. TCII/2196/07/AIDS/Policy. New Delhi, dated 14.03.08

Copy forwarded for information to:

1. CCMs, All Indian Railways.
2. CCM (PM)s, All Indian Railways.
3. CRB, MT, FC, Secretary, DG/RHS, Railway Board.
4. AM(B), Adv (Finance), AM(IT), AM(C), ADV (Vig), DG(RHS), ED(A), EDF(C), ED(C&IS), EDTC(R), EDV(T), ED/Safety, DPR, CFC, TG-I, TG-II, TG-V, TC(CR), V(SS), PR, Health & F(C) Branches, Railway Board.
5. General Manager, Centre for Railway Information System (CRIS), Chanakyapuri, Near National Rail Museum, New Delhi.
6. Director General, Railway Staff College, Vadodara.
7. Managing Director, Konkan Railway Corporation Ltd., Belapur Bhavan, Plot No. 6, Sector 11, CBD Belapur, Navi Mumbai – 400 014.
8. General Manager, Metro Railway, 33/1, J.L. Nehru Road, Calcutta-700071.
9. Chief Commissioner of Railway Safety, Lucknow.
10. The Secretary, Ministry of health & Family Welfare, Nirman Bhavan, New Delhi for issue necessary advice to concrned ART Centres.
11. General Secretary, IRCA, Chelmsford Road, New Delhi for issue of necessary correction slip to IRCA Coaching Tariff No. 25, Part I (Vol. II). The wordings of the rule will be similar to rule of Kidney Patients (S.No. 46, vide CS No. 6 & 9). This will be a new rule & may also be incorporated under rules 101 (3) (f), 101 (14) & Index at the end of the Tariff.

(Ravinesh Kumar)
Director Traffic Comml. (G),
Railway Board.

DA: Certificates.

141

T-11020/24/2008-NACO
Government of India
Ministry of Health and Family welfare
National AIDS Control Organization

9th Floor, Chandralok Building
36 Janpath, New Delhi-110001
Date-28.03.08

## OFFICE MEMORANDUM

To
The Project Director
State AIDS Control Society
(Tamil Nadu, Maharashtra, Andhra Pradesh, Karnataka, Manipur, Nagaland, New Delhi, Chandigarh, Rajasthan, Gujarat, West Bengal, Uttar Pradesh, Goa, Kerala, Himachal Pradesh, Pondicherry, Bihar, Madhya Pradesh, Assam, Mizoram, Punjab, Jharkhand, Haryana, Uttaranchal, J & K, Orissa, Chhattisgarh, Tripura, Meghalaya, Sikkim, Arunachal Pradesh)

**Subject: Grant of concession to AIDS patients for treatment at nominated ART centers**

The Ministry of Railways has decided to grant 50 % concession in train fares to AIDS patients, for treatment at nominated ART Centers and return after treatment. Concession will be admissible in basic mail fares only and will be granted directly by the station masters on production of the certificate in prescribed form issued by Officer-in charge of the concerned ART Center.

This concession would come into eff[illegible] issued from 01.04.08. The letter from Ministry of Railways along with the specimen copies of the prescribed Concession certificates for outward and return journeys are enclosed. Kindly inform the nodal officers of all the ART Centers in your state with a direction that this information is widely circulated among the patients of their ART Centers.

Yours faithfully

(Dr.D. Bachani)
Joint Director & Head
(Care, Support & Treatment Division)

1. Copy by e-mail to Nodal Officers of all ART Centers
2. Copy to Regional Officers

Copy for information to:
1. PPS to AS & DG
2. PPS to APD
3. Dr (F), NACO

Please give proper orientation to all ART + CCC centres

6054
Date 9/4/08

3817
11/4/08

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಹೆಚ್‌ಐವಿ / ಕುಷ್ಠರೋಗಗಳಿಂದ ಪೀಡಿತರಾದವರ ಅರ್ಹ ಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನ ಹಾಗೂ ಉಚಿತ ಶಿಕ್ಷಣ ಒದಗಿಸುವ ಕಾರ್ಯಕ್ರಮದ ಬಗ್ಗೆ.

**ಓದಲಾಗಿದೆ:-** 1. 2013-14ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 192.

2. ಸರ್ಕಾರದ ಆದೇಶ ಸಂಖ್ಯೆ : ಇಡಿ 132 ಮಾಹಿತಿ 2013, ದಿನಾಂಕ . 31-08-2013.

3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರ ಪತ್ರ ಸಂ : ಕಾಶಿಇ/21/HIV & LP/Scholarship/2013-14, ದಿನಾಂಕ : 07.11.2013.

****

**ಪ್ರಸ್ತಾವನೆ:-**

1. ಮೇಲೆ (1)ರಲ್ಲಿ ಓದಲಾದ ಆಯವ್ಯಯ ಭಾಷಣದ ಕಂಡಿಕೆ 192ರಲ್ಲಿ ಹೆಚ್‌ಐವಿ / ಕುಷ್ಠರೋಗಗಳಿಂದ ಪೀಡಿತರಾದವರ ಅರ್ಹ ಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನ ಹಾಗೂ ಉಚಿತ ಶಿಕ್ಷಣವನ್ನು ಒದಗಿಸಲು ಉದ್ದೇಶಿಸಲಾಗಿದೆ ಎಂದು ಘೋಷಿಸಿದೆ.

2. ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪದವಿ ಅಥವಾ ಸ್ನಾತಕೋತ್ತರ ಕೋರ್ಸ್, ವೃತ್ತಿ ಶಿಕ್ಷಣ ಕೋರ್ಸ್ ಹಾಗೂ ವೃತ್ತಿ ಪರ ಕೋರ್ಸ್‌ಗಳಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಹೆಚ್‌ಐವಿ/ಕುಷ್ಠರೋಗಗಳಿಂದ ಪೀಡಿತರಾದ ಪಾಲಕರ ಅರ್ಹ ಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನ ಹಾಗೂ ಉಚಿತ ಶಿಕ್ಷಣ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರಿಗೆ ತಾತ್ವಿಕ ಅನುಮತಿ ನೀಡಲಾಗಿದೆ. ಮುಂದುವರೆದು ವಿದ್ಯಾರ್ಥಿಗಳನ್ನು ಖಚಿತವಾಗಿ ಆಯ್ಕೆ ಮಾಡಿಕೊಳ್ಳಲು ತಿಳಿಸಿ, ಅನುಷ್ಠಾನಗೊಳ್ಳಬೇಕಾದ ಕ್ರಮಗಳ ಬಗ್ಗೆ ಸವಿವರವಾದ ಯೋಜನಾ ವರದಿಯನ್ನು ಸಲ್ಲಿಸಲು ತಿಳಿಸಲಾಗಿತ್ತು.

3. ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಕಾಲೇಜು ಶಿಕ್ಷಣ ಆಯುಕ್ತರು, ಇಲಾಖಾ ವ್ಯಾಪ್ತಿಯಲ್ಲಿ ಒಟ್ಟು 362 ಸರ್ಕಾರಿ ಕಾಲೇಜುಗಳು ಹಾಗೂ 314 ಖಾಸಗಿ ಅನುದಾನಿತ ಕಾಲೇಜುಗಳಿದ್ದು, ಅವುಗಳ ಪೈಕಿ ಜಿಲ್ಲಾವಾರು, ಪ್ರತಿ ಜಿಲ್ಲೆಗೆ ಅಂದಾಜು 10 ವಿದ್ಯಾರ್ಥಿಗಳನ್ನು ಸದರಿ ವಿದ್ಯಾರ್ಥಿವೇತನಕ್ಕಾಗಿ ಪರಿಗಣಿಸಬಹುದಾಗಿರುತ್ತದೆ ಅಥವಾ ಗುರುತಿಸಬಹುದಾಗಿರುತ್ತದೆ ಹಾಗೂ ಪ್ರತಿ ಅರ್ಹ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣದೊಂದಿಗೆ ವಾರ್ಷಿಕವಾಗಿ ಅಂದಾಜು ರೂ.5000/-ಗಳನ್ನು ವಿದ್ಯಾರ್ಥಿ ವೇತನವನ್ನಾಗಿ ಮಂಜೂರು ಮಾಡಬಹುದಾಗಿದೆ ಎಂದು ಪ್ರಸ್ತಾವನೆ ಸಲ್ಲಿಸಿದ್ದಾರೆ.

4. ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 132 ಮಾಹಿತಿ 2013, ಬೆಂಗಳೂರು ದಿನಾಂಕ : 18-11-2013.**

5. ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರಿ, ಅನುದಾನಿತ ಸಂಸ್ಥೆಗಳಲ್ಲಿ ಸರ್ಟಿಫಿಕೇಟ್ ಕೋರ್ಸ್, ಡಿಪ್ಲೋಮ, ಪದವಿ, ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಹೆಚ್‌ಐವಿ/ಹೆಡ್ಸ್ ಕುಷ್ಠರೋಗದಿಂದ ಬಳಲುತ್ತಿರುವ ವಿದ್ಯಾರ್ಥಿಗಳಿಗೆ ಹಾಗೂ ಜೀವಂತವಿರುವ

ಅಥವಾ ಮರಣ ಹೊಂದಿರುವ ಹೆಚ್‌ಐವಿ/ಏಡ್ಸ್, ಕುಷ್ಠರೋಗದಿಂದ ಬಳಲುತ್ತಿರುವ/ಬಳಲುತ್ತಿದ್ದ ಪಾಲಕರ ಮಕ್ಕಳು ಮೇಲ್ಕಂಡ ಕೋರ್ಸ್/ಪದವಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ಅವರ ಪ್ರಚಲಿತ ಆರೋಗ್ಯ ಸ್ಥಿತಿಯನ್ನು ಪರಿಗಣಿಸದೆ ಅವರುಗಳಿಗೆ ಉಚಿತ ಶಿಕ್ಷಣದೊಂದಿಗೆ ವಾರ್ಷಿಕವಾಗಿ ವಿದ್ಯಾರ್ಥಿ ವೇತನವನ್ನು ನೀಡಲು ಈ ಕೆಳಕಂಡ ಷರತ್ತುಗಳು ಹಾಗೂ ಅನುಬಂಧದಲ್ಲಿ ನೀಡಿದ ಮಾರ್ಗಸೂಚಿಗಳ ಆಧಾರ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ.

ಷರತ್ತುಗಳು:-

1. ಈ ಕಾರ್ಯಕ್ರಮದ ಬಗ್ಗೆ ರಾಜ್ಯಾದ್ಯಾಂತ ಪ್ರಚಾರವನ್ನೂ ನೀಡಿ, ನಿಗದಿತ ಅರ್ಜಿ ನಮೂನೆಗಳನ್ನು ಒದಗಿಸಿ, ಲಗತ್ತಿಸಬೇಕಾದ ದಾಖಲೆಗಳ ವಿವರಗಳನ್ನು ಲಗತ್ತಿಸಿ ಸವಿವರ ಮಾರ್ಗಸೂಚಿಗಳನ್ನು ಸರ್ಕಾರಿ ಹಾಗೂ ಅನುದಾನಿತ ತಾಂತ್ರಿಕ ಸಂಸ್ಥೆಗಳಿಗೆ, ಪ್ರಥಮ ದರ್ಜೆಯ ಕಾಲೇಜುಗಳಿಗೆ ಹಾಗೂ ವಿಶ್ವವಿದ್ಯಾಲಯಗಳಿಗೆ ವಿತರಿಸಿ ಕಾಲಸೂಚಿಯನ್ನು ನಿಗದಿ ಪಡಿಸಿ ಅರ್ಜಿಯನ್ನು ಪಡೆಯುವುದು.

2. ಈ ರೀತಿ ಪಡೆದ ಅರ್ಜಿಗಳನ್ನು ಪರಿಶೀಲಿಸಿ 2014 ಫೆಬ್ರವರಿ ಮಾಹೆಯೊಳಗೆ ಅರ್ಹ ಶುಲ್ಕ ಮರು ಪಾವತಿ ಮಾಡುವುದು ಹಾಗೂ ನಿಗದಿಪಡಿಸಿದ ವಿದ್ಯಾರ್ಥಿವೇತನವನ್ನು ನೀಡುವುದು.
3. ಈ ಸೌಲಭ್ಯವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳು ಬೇರೆ ಯಾವುದೇ ಸೌಲಭ್ಯ ಪಡೆಯದಿರುವುದನ್ನು ಖಚಿತ ಪಡಿಸಿಕೊಳ್ಳುವುದು.
4. ಫಲಾನುಭವಿಗಳ ಅರ್ಹತೆ ಮತ್ತು ಆರೋಗ್ಯ ಸ್ಥಿತಿಯನ್ನು ದೃಢೀಕರಿಸಲು ಅಧಿಕಾರ ನೀಡಿದ ಜಿಲ್ಲಾ ಆರೋಗ್ಯ ಪ್ರಾಧಿಕಾರಗಳನ್ನು ಗುರುತಿಸಿ ನಕ್ಷೆ ರೂಪದಲ್ಲಿ ಎಲ್ಲಾ ಸಂಬಂಧಿತ ಸಂಸ್ಥೆಗಳು/ಕಾಲೇಜುಗಳಿಗೆ ತಿಳಿಸುವುದು.
5. ಈ ಸೌಲಭ್ಯವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಕೋರ್ಸ್‌ವಾರು, ಸಂಸ್ಥೆಯವಾರು, ಲಿಂಗವಾರು ಮತ್ತು ಪಂಗಡವಾರು ಫಲಾನುಭವಿಗಳ ದಾಖಲೆಗಳನ್ನು ಪ್ರತಿ ವರ್ಷ ನಿರ್ವಹಿಸಿ ಸಮರ್ಪಕ ಡೇಟಾಬೇಸನ್ನು ಸಿದ್ಧಪಡಿಸುವುದು.
6. ಆರೋಗ್ಯ ಇಲಾಖೆಯೊಂದಿಗೆ ಸಂಪರ್ಕಿಸಿ ವಿದ್ಯಾರ್ಥಿಗಳ ಅರ್ಹತೆ ಹಾಗೂ ಅನುಸರಿಸಬೇಕಾದಕ್ರಮ, ನಿರ್ವಹಿಸಬೇಕಾದ ದಾಖಲೆಗಳ ಪಟ್ಟಿಯನ್ನು ಸಿದ್ಧಪಡಿಸುವುದು.
7. ಸಂಬಂಧಿತ ಸಂಸ್ಥೆಗಳ, ಕಾಲೇಜುಗಳ ಮುಖ್ಯಸ್ಥರುಗಳಿಗೆ/ಪ್ರಾಂಶುಪಾಲರುಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಸೂಚನೆಗಳನ್ನು ಹಾಗೂ ಮಾರ್ಗ ಸೂಚಿಗಳನ್ನು ಮುಂಚಿತವಾಗಿಯೇ ವಿತರಿಸುವುದು.
8. ವಿದ್ಯಾರ್ಥಿವೇತನ ಹಾಗೂ ಶುಲ್ಕ ಮರುಪಾವತಿ ಮೊತ್ತವನ್ನು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾಯಿಸತಕ್ಕದ್ದು.
9. ಕೆ.ಟಿ.ಪಿಪಿ ನಿಯಮಗಳನ್ನು ಹಾಗೂ ಪ್ರಚಲಿತ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸುವುದು.

3 144

10. ಫಲಾನುಭವಿಗಳನ್ನು ಗುರುತಿಸಿ ಬೇಕಾಗುವ ಅನುದಾನವನ್ನು 2013-14ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2203-00-107-1-00(ಯೋಜನೆ) ವಿದ್ಯಾರ್ಥಿ ವೇತನಗಳು ಇದರಡಿ ಲಭ್ಯವಿರುವ ಅನುದಾನದ ಮಿತಿಯಲ್ಲಿ ನಿಯಮಾನುಸಾರ ಭರಿಸುವುದು. ಹೆಚ್ಚುವರಿ ಬೇಕಾಗಿದ್ದಲ್ಲಿ ಸೂಕ್ತ ಸಮರ್ಥನೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.

6. ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 634 ವೆಚ್ಚ-8 2013,ದಿ :31-08-2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಐ.ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ).

ಸಂಖ್ಯೆ : ಕಾಶಿಇ/21/HIV & LP/Scholarship/2013-14

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 26-11-2013.

ಮೇಲ್ಕಂಡ ಸರ್ಕಾರದ ಆದೇಶ ಸಂಖ್ಯೆ: ಇಡಿ 132 ಮಾಹಿತಿ 2013 ದಿನಾಂಕ: 18-11-2013 ನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರಭಾರ)

ಗೆ,

1. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳು ಹಾಗೂ ಕುಲಸಚಿವರುಗಳಿಗೆ
2. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಧಾರವಾಡ, ಮಂಗಳೂರು, ಗುಲ್ಬರ್ಗಾ ಮತ್ತು ಶಿವಮೊಗ್ಗ- ತಮ್ಮ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಿಂದ ಬರುವ HIV & Leprosy ವಿದ್ಯಾರ್ಥಿವೇತನದ ಅರ್ಜಿಗಳನ್ನು ದಿನಾಂಕ: 18-11-2013 ರ ಸರ್ಕಾರದ ಆದೇಶದ ಷರತ್ತುಗಳಲ್ಲಿ ತಿಳಿಸಲ್ಪಟ್ಟ ಅಂಶಗಳನ್ವಯ ಪರಿಶೀಲಿಸಿ ವಿದ್ಯಾರ್ಥಿವೇತನಕ್ಕೆ ಅರ್ಹತೆ ಹೊಂದುವ ವಿದ್ಯಾರ್ಥಿಗಳ ಪಟ್ಟಿಯನ್ನು ಮೈಕ್ರೋಸಾಫ್ಟ್ ಎಕ್ಸೆಲ್‌ನಲ್ಲಿ ಸಿದ್ದಪಡಿಸಿದ ಅಂಕಿಅಂಶಗಳನ್ನು ಇ-ಮೇಲ್ ವಿಳಾಸ:dce.scholarship.2013@gmail.com ಕ್ಕೆ ಕಳುಹಿಸಲು ಸೂಚಿಸಲಾಗಿದೆ
3. ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳಿಗೆ (ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರ ಮುಖಾಂತರ)- ದಿನಾಂಕ: 18-11-2013 ರ ಆದೇಶದ ಷರತ್ತುಗಳಲ್ಲಿ ತಿಳಿಸಲ್ಪಟ್ಟ ಅಂಶಗಳನ್ವಯ HIV & Leprosy ಗೆ ಪೀಡಿತರಾದವರ ಮಕ್ಕಳಿಗೆ/ HIV & Leprosy ಯಿಂದ ಬಳಲುತ್ತಿರುವ ವಿದ್ಯಾರ್ಥಿಗಳಿಗೆ ಸದರಿ ವಿದ್ಯಾರ್ಥಿವೇತನ ಮಂಜೂರಾತಿ ಸಂಬಂಧ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ದಿನಾಂಕ: 31-12-2013 ರೊಳಗಾಗಿ ಕಳುಹಿಸಲು ಸೂಚಿಸಲಾಗಿದೆ
4. ಸಹಾಯಕ ನಿರ್ದೇಶಕರು, ಯೋಜನೆ/ಆಯವ್ಯಯ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು- ಮುಂದಿನ ಸೂಕ್ತ ಕ್ರಮಕ್ಕಾಗಿ
5. ಹೆಚ್ಚಿನ ಪ್ರತಿ/ಕಛೇರಿ ಪ್ರತಿ

Movement Order

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ : ಕಾಶಿಇ/21/HIV & LP/Scholarship/2013-14

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು. ದಿನಾಂಕ:04.01.2014.

## ಪರಿಚಲನಾದೇಶ

ಮಾನ್ಯರೆ,

ವಿಷಯ: ಹೆಚ್.ಐ.ವಿ./ಏಡ್ಸ್ ಅಥವಾ ಕುಷ್ಠರೋಗ ಪೀಡಿತರಾದ (ಬದುಕಿರುವ ಇಲ್ಲವೇ ಮೃತ ಹೊಂದಿರುವ) ತಂದೆ ತಾಯಂದಿರಿಗೆ ಜನಿಸಿದ ವಿದ್ಯಾರ್ಥಿಗಳಗೆ ಮತ್ತು HIV/AIDS ಅಥವಾ ಕುಷ್ಠರೋಗ ಪೀಡಿತ ವಿದ್ಯಾರ್ಥಿಗಳಗೆ ಉಚಿತ ಶಿಕ್ಷಣ ಮತ್ತು ಶಿಷ್ಯವೇತನ ಒದಗಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಸುವ ಸಂಬಂಧ ಮಾರ್ಗಸೂಚಿಗಳನ್ನು (Guidelines) ಪರಿಚಲಸುವ ಬಗ್ಗೆ

ಉಲ್ಲೇಖ: 1) ಸರ್ಕಾರದ ಆದೇಶದ ಸಂಖ್ಯೆ ಇಡಿ 132 ಮಾಹಿತಿ 2013. ಬೆಂಗಳೂರು. 31-8-2013 ಮತ್ತು ದಿ:18.11.2013

2) ಈ ಕಛೇರಿಯ ಸಮಸಂಖ್ಯೆ ಪತ್ರದ ದಿನಾಂಕ: 26-11-2013

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿಸಿರುವ ದಿನಾಂಕ 18-11-2013ರ ಸರ್ಕಾರದ ಆದೇಶವನ್ನು ಉಲ್ಲೇಖ (2) ರಂತೆ ಈಗಾಗಲೇ ರವಾನಿಸಿದ್ದು. ಈ ಸಂಬಂಧದ ಮಾರ್ಗಸೂಚಿಗಳನ್ನು ಸರ್ಕಾರವು ಜಾರಿಗೊಳಸಿದ್ದು ಅದನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅಗತ್ಯ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:-

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಯವರಿಗೆ. ವಿಧಾನ ಸೌಧ. ಬೆಂಗಳೂರು – ಮಾಹಿತಿಗಾಗಿ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಯವರಿಗೆ. ಉನ್ನತ ಶಿಕ್ಷಣ ಇಲಾಖೆ. ಬಹು ಮಹಡಿಗಳ ಕಟ್ಟಡ. 6ನೇ ಮಹಡಿ ಬೆಂಗಳೂರು-ಮಾಹಿತಿಗಾಗಿ
3. ಟಿ.ಎಫ್. ಮಾಗಿ. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ. ಶಿಕ್ಷಣ ಇಲಾಖೆ (ಯೋಜನೆ). ಬೆಂಗಳೂರು – ಮಾಹಿತಿಗಾಗಿ
4. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು. ಕಾಲೇಜು ಶಿಕ್ಷಣ ಇಲಾಖೆ. ಬೆಂಗಳೂರು. ಮೈಸೂರು. ಮಂಗಳೂರು. ಧಾರವಾಡ. ಗುಲ್ಬರ್ಗ ಮತ್ತು ಶಿವಮೊಗ್ಗ – ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಗೆ ಮೇಲ್ಕಂಡ ಸರ್ಕಾರಿ ಆದೇಶವನ್ನು ಪರಿಚಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
5. ಕುಲಪತಿಗಳು/ಕುಲಸಚಿವರು. ಬೆಂಗಳೂರು. ಮೈಸೂರು. ತುಮಕೂರು. ಕರ್ನಾಟಕ. ಮಂಗಳೂರು. ಕುವೆಂಪು. ಧಾರವಾಡ. ಚಿತ್ತೂರು. ವಿಜಯನಗರ. ಗುಲ್ಬರ್ಗ. ದಾವಣಗೆರೆ ವಿಶ್ವವಿದ್ಯಾಲಯಗಳು- ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯ ಕಾಲೇಜುಗಳಗೆ ಮೇಲ್ಕಂಡ ಸರ್ಕಾರಿ ಆದೇಶವನ್ನು ಪರಿಚಲಿಸಿ ಅಗತ್ಯಕ್ರಮ ಕೈಗೊಳ್ಳಲು ಕೋರಿದೆ
6. ನಿರ್ದೇಶಕರು. ತಾಂತ್ರಿಕ ಶಿಕ್ಷಣ ಇಲಾಖೆ. ಬೆಂಗಳೂರು. ಮೇಲ್ಕಂಡ ಸರ್ಕಾರಿ ಆದೇಶವನ್ನು ತಮ್ಮ ವ್ಯಾಪ್ತಿಯ ಸರ್ಕಾರಿ/ ಅನುದಾನಿತ ಪಾಲಿಟೆಕ್ನಿಕ್‌ಗಳು. ಎಂಜಿನಿಯರಿಂಗ್ ಕಾಲೇಜುಗಳು/ ಇತರೆ ಸಂಸ್ಥೆಗಳಗೆ ಪರಿಚಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ.
7. ಸಹಾಯಕ ನಿರ್ದೇಶಕರು. ಯೋಜನಾ ವಿಭಾಗ. ಕೇಂದ್ರ ಕಛೇರಿ ಬೆಂಗಳೂರು– ಸೂಕ್ತ ಕ್ರಮಕ್ಕಾಗಿ
8. ಶ್ರೀ ಎಂ. ಪಾಲಸ್ವಾಮಿ. ಗೆಜೆಟೆಡ್ ಮ್ಯಾನೇಜರ್ ಮತ್ತು ನೋಡಲ್ ಅಧಿಕಾರಿ. ಕೇಂದ್ರ ಕಛೇರಿ. ಬೆಂಗಳೂರು – ಮಾಹಿತಿಗಾಗಿ
9. ಮಾಹಿತಿ ಅಧಿಕಾರಿಗಳು. ಕೇಂದ್ರ ಕಛೇರಿ. ಬೆಂಗಳೂರು – ವೆಬ್‌ಸೈಟ್‌ನಲ್ಲಿ ನಮೂದಿಸಲು ಕೋರಿದೆ
10. ಕಛೇರಿ ಪ್ರತಿ

1-HIV-2013 A

146

ಸರ್ಕಾರಿ ಆದೇಶ ಸಂಖ್ಯೆ: ಇಡಿ 132 ಮಾಹಿತಿ 2013 ಬೆಂಗಳೂರು ದಿನಾಂಕ: 18.11.2013ರ ಅನುಬಂಧ

## ಮಾರ್ಗಸೂಚಿ

## ಹೆಚ್‌ಐವಿ/ಏಡ್ಸ್ ಅಥವಾ ಕುಷ್ಟ ರೋಗಪೀಡಿತರಾದ (ಬದುಕಿರುವ ಇಲ್ಲವೇ ಮೃತಹೊಂದಿರುವ) ತಂದೆ ತಾಯಂದಿರಿಗೆ ಜನಿಸಿದ ವಿದ್ಯಾರ್ಥಿಗಳಿಗೆ ಮತ್ತು ಹೆಚ್‌ಐವಿ/ಏಡ್ಸ್ ಅಥವಾ ಕುಷ್ಟರೋಗಪೀಡಿತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಮತ್ತು ಶಿಷ್ಯವೇತನ

12ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಉನ್ನತ ಶಿಕ್ಷಣದ ಪ್ರಮುಖ ಗುರಿಯೆಂದರೆ, ಎಲ್ಲರನ್ನೊಳಗೊಂಡ ಶಿಕ್ಷಣ ಅಂದರೆ ಹೊರದೂಡಿದವರನ್ನು ಒಳಗೂಡಿಸುವುದು. ಸರ್ಕಾರವು ಸರ್ವರ ಸುಖೀರಾಜ್ಯದ ಬೆಂಬಲಿತವಾಗಿರುವುದರಿಂದ, ಸದಾ ಯಾತನೆಗೊಂಡು ನತದೃಷ್ಟ ಬಲಿಪಶುಗಳಾದವರನ್ನೂ ಸಹ ಉನ್ನತ ಶಿಕ್ಷಣದ ಮುಖ್ಯವಾಹಿನಿಯಲ್ಲಿ ಸಮ್ಮಿಲನಗೊಳಿಸಿ ಉನ್ನತ ಶಿಕ್ಷಣ ಮತ್ತು ಕೌಶಲ್ಯಗಳನ್ನು ಮೈಗೂಡಿಸಿಕೊಂಡು ತಮ್ಮ ಜೀವನಾಗತ್ಯತೆಗಳನ್ನು ಗಳಿಸಿಕೊಳ್ಳಲನುವಾಗುವಂತೆ ಅವರ ಅವಶ್ಯಕತೆಗಳಿಗೆ ಸ್ಪಂದಿಸಲುದ್ದೇಶಿಸಿದೆ. ಸದ್ಯಕ್ಕಂತೂ ಹೆಚ್.ಐ.ವಿ ರೋಗವು ವಾಸಿಯಾಗಲಾರದ ಮಾರಣಾಂತಿಕ ರೋಗ. ಬಹುಮಂದಿ ಅಮಾಯಕರು ಹೆಚ್.ಐ.ವಿ. ವೈರಾಣುವಿನ ಅಶಂಕಿತ ಸಂಪರ್ಕ ಹೊಂದಿದ ಕಾರಣ ರೋಗಪೀಡಿತರಾಗಿದ್ದಾರೆ. ಸೋಂಕಿತ ಮಹಿಳೆಗೆ ಹುಟ್ಟಿದ ಅಮಾಯಕ ಮಕ್ಕಳೂ ಸಹ ರೋಗಕ್ಕೆ ತುತ್ತಾಗಿವೆ. ಸೋಂಕಿತ ವ್ಯಕ್ತಿಯ ರಕ್ತ ಅಥವಾ ರಕ್ತದ ಉತ್ಪನ್ನಗಳನ್ನು ಸ್ವೀಕರಿಸಿದ ಅಮಾಯಕ ವ್ಯಕ್ತಿಗಳೂ ಸಹ ರೋಗಕ್ಕೆ ಬಲಿಯಾಗಿದ್ದಾರೆ. ಕುಷ್ಟ ರೋಗವೂ ಸಹ ನಿಧಾನವಾಗಿ ಕೃಶಗೊಳಿಸುವ ರೋಗವಾಗಿದ್ದು ಅಂಗಾಂಗಗಳ ತುದಿಯನ್ನು ವಿಕೃತಗೊಳಿಸಿ ಕೈಗೆಲಸ ಮಾಡಲು ಸಾಧ್ಯವಾಗದಂತೆ ನಿರ್ಬಲಗೊಳಿಸುತ್ತದೆ. ಮುಂಚಿತವಾಗಿ ರೋಗ ಪ್ರಾಥಮಿಕ ಹಂತದಲ್ಲೇ ರೋಗ ನಿಯಂತ್ರಣ ಮಾಡದಿದ್ದಲ್ಲಿ, ಹಲವಾರು ಅಂಗಾಂಗಗಳು ವಿಕೃತಿಗೊಂಡು ರೋಗಪೀಡಿತ ವ್ಯಕ್ತಿಯು ತುಂಬಾ ಭಯಾನಕವಾಗಿ ಕಾಣುವುದರಿಂದ ಸಾಮಾನ್ಯವಾಗಿ ಕಾರ್ಯನಿರ್ವಹಿಸಲಾರದವನಾಗುತ್ತಾನೆ.

ಇಂತಹ ರೋಗಗಳಿಂದ ಬಳಲುತ್ತಿರುವ ವಿದ್ಯಾರ್ಥಿಗಳು ಅಥವಾ ಅಂತಹ ರೋಗಪೀಡಿತರಾದಂತಹ ತಂದೆತಾಯಂದಿರಿಗೆ ಹುಟ್ಟಿದ ವಿದ್ಯಾರ್ಥಿಗಳು ಇಡೀ ಜೀವನ ಪರ್ಯಂತ ಸಮಾಜದ ಬಹಿಷ್ಕಾರಕ್ಕೊಳಗಾಗುತ್ತಾರೆ. ಮಾತಾಪಿತೃಗಳು ಕೆಲಸ ಕಳೆದುಕೊಳ್ಳುತ್ತಾರೆ ಮತ್ತು ಸಾಮಾಜಿಕ ಸಂಪರ್ಕ ಕಡಿದುಕೊಂಡು ಜೀವನ ನಡೆಸಲು ದುರ್ಬರಗೊಂಡು ನಿರಂತರ ಸಂಘರ್ಷಕ್ಕೊಳಗಾಗುತ್ತಾರೆ. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಕಡ್ಡಾಯ ಶಿಕ್ಷಣ ಹಕ್ಕು ಜಾರಿಯಲ್ಲಿರುವುದರಿಂದ ಮತ್ತು ಪ್ರೌಢಶಿಕ್ಷಣವನ್ನು ಸರ್ಕಾರವು ಸಾರ್ವತ್ರಿಕಗೊಳಿಸುತ್ತಿರುವುದರಿಂದ ಸ್ವಲ್ಪ ಮಟ್ಟಿಗೆ ಸಹಾಯವಾಗುತ್ತದೆ. ಆದರೆ ಅಂತಹ ವಿದ್ಯಾರ್ಥಿಗಳಿಗೆ ಪ್ರೌಢ ಶಿಕ್ಷಣ ಮುಗಿಸಿ ಮುಂದೆ ಉನ್ನತ ಶಿಕ್ಷಣ ಮುಂದುವರೆಸಲು ಅವರಿಗೆ ಕಷ್ಟಸಾಧ್ಯವಾಗುತ್ತದೆ. ಅಂತಹ ಅರ್ಹ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಮತ್ತು ಶಿಷ್ಯವೇತನ ನೀಡಿ ಸಹಾಯ ಮಾಡಲು ಸರ್ಕಾರ ಯೋಜಿಸಿದೆ.

### ಯೋಜನೆಯಡಿಯಲ್ಲಿ ಫಲಾನುಭವಿಗಳಾಗಲು ವಿದ್ಯಾರ್ಥಿಗಳಿಗೆ ಅರ್ಹತೆ ಮತ್ತು ಯೋಜನಾ ವ್ಯಾಪ್ತಿ

ಹೆಚ್ ಐ.ವಿ. ಅಥವಾ ಕುಷ್ಟ ರೋಗದಿಂದ ತೊಂದರೆಗೊಳಗಾಗಿರುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಮತ್ತು ಶಿಷ್ಯವೇತನವನ್ನು ನೀಡಲು ಸರ್ಕಾರ ಯೋಜನೆಯೊಂದನ್ನು ಅನುಮೋದಿಸಿದೆ. ಈ ಯೋಜನೆಯ ಲಾಭ ಪಡೆಯಲು ಕೆಳಕಂಡವರು ಅರ್ಹರಾಗಿರುತ್ತಾರೆ.

1) ಹೆಚ್.ಐ.ವಿ/ಏಡ್ಸ್ ಅಥವಾ ಕುಷ್ಠ ರೋಗದಿಂದ ಸೋಂಕಿತರಾಗಿದ್ದು ಬದುಕಿರುವ ಅಥವಾ ಮೃತರಾಗಿರುವ ತಂದೆತಾಯಿಯರಿಗೆ ಜನಿಸಿದ ಮಕ್ಕಳು;
2) ಪ್ರಸ್ತುತ ರೋಗಗ್ರಸ್ತ ಅಥವಾ ರೋಗಮುಕ್ತವಾಗಿರುವ ಪರಿಸ್ಥಿತಿಯನ್ನು ಪರಿಗಣಿಸದೇ ಹೆಚ್.ಐ.ವಿ./ಏಡ್ಸ್ ಅಥವಾ ಕುಷ್ಠ ರೋಗದಿಂದ ಸೋಂಕಿತರಾದ ವಿದ್ಯಾರ್ಥಿ;
3) ಮೇಲ್ಕಾಣಿಸಿದಂತಹ ವಿದ್ಯಾರ್ಥಿಗಳು ಕರ್ನಾಟಕದ ಯಾವುದೇ ಜಿಲ್ಲೆಯಿಂದ ಬಂದವರಾಗಿರಬಹುದು;
4) ರೋಗಗ್ರಸ್ತ ವಿದ್ಯಾರ್ಥಿಯ ಕುಟುಂಬ ಕರ್ನಾಟಕದಲ್ಲಿ ಕನಿಷ್ಠ 25 ವರ್ಷಗಳ ವಾಸ್ತವ್ಯ ಹೊಂದಿರಬೇಕು
5) ರೋಗಗ್ರಸ್ತ ವಿದ್ಯಾರ್ಥಿಯು ತನ್ನ ಕುಟುಂಬದೊಂದಿಗೆ ವಿದ್ಯಾರ್ಥಿನಿಲಯ ಅಥವಾ ಅನಾಥಾಲಯದಲ್ಲಿ ಅಥವಾ ಹೆಚ್ ಐ.ವಿ./ಕುಷ್ಠ ನಿಲಯಗಳಲ್ಲಿ ವಾಸಿಸುತ್ತಿರುವರಾಗಿರಬಹುದು.
6) ವಿದ್ಯಾರ್ಥಿಯು ಅಥವಾ ಅವರ ತಂದೆತಾಯಿಗಳು ಕುಷ್ಠ ರೋಗಕ್ಕೆ ಎಂ.ಡಿ.ಟಿ ಚಿಕಿತ್ಸೆ ಪಡೆದವರಾಗಿರಬೇಕು ಅಥವಾ ಹೆಚ್ ಐ.ವಿ./ಏಡ್ಸ್ ರೋಗಕ್ಕೆ ಎ.ಆರ್.ಟಿ ಚಿಕಿತ್ಸೆ ಪಡೆದವರಾಗಿರಬೇಕು.
7) ಈ ಯೋಜನೆಯು ಸರ್ಕಾರಿ ಹಾಗೂ ಅನುದಾನಿತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ಮಾತ್ರ ಅನ್ವಯವಾಗುತ್ತದೆ.
8) ಮೇಲ್ಕಾಣಿಸಿದ ಎಲ್ಲಾ ಅಂಶಗಳಲ್ಲೂ ಅರ್ಹರಾಗಿರುವ ವಿದ್ಯಾರ್ಥಿಗಳು ಪ್ರಮಾಣ ಪತ್ರದ ಅಧ್ಯಯನ, ಡಿಪ್ಲೋಮ ಅಧ್ಯಯನ, ಪದವಿ ಅಧ್ಯಯನ, ಅಥವಾ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಿತ್ತಿರುವವರಾಗಿರಬೇಕು. ಪಿ.ಹೆಚ್.ಡಿ ಅಧ್ಯಯನದ ವಿದ್ಯಾರ್ಥಿಗಳು ಫೆಲೋಶಿಪ್ ಪಡೆಯುವುದರಿಂದ ಈ ಯೋಜನೆಯಡಿ ಫಲಾನುಭವಿಯಾಗಲು ಅರ್ಹರಿರುವುದಿಲ್ಲ.

**ನೈಜ ಫಲಾನುಭವಿಗಳ ಪಟ್ಟಿಯನ್ನು ಪಡೆದುಕೊಳ್ಳುವ ವಿಧಾನ:**

ಹೆಚ್.ಐ.ವಿ./ಏಡ್ಸ್ ಅಥವಾ ಕುಷ್ಠ ರೋಗದಿಂದ ಸೋಂಕಿತರಾಗಿರುವ ವ್ಯಕ್ತಿಗಳ ಡಾಟಾಬೇಸ್‌ನ್ನು ಆರೋಗ್ಯ ಇಲಾಖೆ/ಕರ್ನಾಟಕ ರಾಜ್ಯ ಏಡ್ಸ್ ನಿವಾರಣೆ ಸಮಾಜ(ಕೆ.ಎಸ್.ಎ.ಪಿ.ಎಸ್) ಪಡೆಯಬಹುದಾಗಿದ್ದು, ಇದರಿಂದ ಎಂ.ಡಿ.ಟಿ ಆಡಳಿತ ವ್ಯಾಪ್ತಿಯಿಂದ ಸೋಂಕಿತ/ಉಪಚಾರ ಪಡೆದ/ವಾಸಿಮಾಡಿರುವ ಹೆಚ್.ಐ.ವಿ./ಏಡ್ಸ್ ಅಥವಾ ಕುಷ್ಠ ರೋಗದಿಂದ ಸೋಂಕಿತರಾಗಿರುವ ವಿದ್ಯಾರ್ಥಿ ಅಥವಾ ಪೋಷಕರಿಗೆ ಸೋಂಕಯಾಗಿರುವ ಬಗ್ಗೆ ಖಚಿತಪಡಿಸಕೊಳ್ಳುವುದು. ಕುಷ್ಠರೋಗದಿಂದ ಸೋಂಕಿತ ವ್ಯಕ್ತಿಗಳ ಬಗ್ಗೆ ಅಥವಾ ಎಂ.ಡಿ.ಟಿ (ಮಲ್ಟಿ ಡ್ರಗ್ ಥೆರಪಿ) ಅಥವಾ ಪೂರ್ಣಗೊಂಡ ಎಂ.ಡಿ.ಟಿ ಕುರಿತ ವೈದ್ಯರಿಂದ ಚಿಕತ್ಸೆ ಪಡೆದಿರುವ ಕುರಿತು ಪ್ರಮಾಣಪತ್ರವನ್ನು ಪಡೆಯುವುದು. ಸದರಿ ಪ್ರಮಾಣಪತ್ರವನ್ನು ಜಿಲ್ಲಾ ಕುಷ್ಠರೋಗ ಅಧಿಕಾರಿ/ಸರ್ಕಾರಿ ಆಸ್ಪತ್ರೆಗಳ ಅಧೀಕ್ಷಕರವರಿಂದ/ ಜಿಲ್ಲಾ ವೈದ್ಯಕೀಯ ಅಧಿಕಾರಿಗಳಿಂದ/ ಯಾವುದಾದರು ಅಧಿಕೃತ ವೈದ್ಯರಿಂದ ದೃಢೀಕರಣ ಮಾಡಿಸಬೇಕಾಗುತ್ತದೆ. ಹೆಚ್.ಐ.ವಿ./ಏಡ್ಸ್ ಪೀಡಿತ ಪೋಷಕರ ಅಥವಾ ವಿದ್ಯಾರ್ಥಿಗಳ ಸಮಾಜಿಕ ಸ್ಥಾನಮಾನಗಳ ವಾಸ್ತವತೆ ಬಗ್ಗೆ, ಸ್ಥಳೀಯ ಸರ್ಕಾರಿ ವೈದ್ಯಾಧಿಕಾರಿಗಳಿಂದ ಪ್ರಮಾಣಪತ್ರವನ್ನು ಪಡೆಯಬಹುದಾಗಿದ್ದು, ಅದಕ್ಕೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಮೇಲುರುಜುವನ್ನು ಪಡೆಯಬಹುದಾಗಿದೆ.

ಅರ್ಜಿ ಹಾಕಬಯಸುವ ಫಲಾನುಭವಿಗಳಿಂದ ತಮ್ಮ ಜನ್ಮದಿನಾಂಕದ ನೈಜತೆ ಬಗ್ಗೆ ಜನನ ಪ್ರಮಾಣಪತ್ರ/ವರ್ಗಾವಣೆ ಪ್ರಮಾಣಪತ್ರ/ ಎಸ್.ಎಸ್.ಎಲ್.ಸಿ ಅಂಕ ಪಟ್ಟಿ ಹಾಜರುಪಡಿಸ ಪ್ರಮಾಣವನ್ನು ರುಜುಪಡಿಸಬಹುದಾಗಿದೆ. ಪೋಷಕರ ಸಂಬಂಧ ಅಥವಾ ವಂಶ ಸಂಬಂಧದ ಬಗ್ಗೆ ವಿಚಿತಪಡಿಸಲು/ಗುರುತಿಸಲು ಎಸ್.ಎಸ್.ಎಲ್.ಸಿ ಅಂಕ ಪಟ್ಟಿ ಅಥವಾ ಸರ್ಕಾರದಿಂದ ಬಿತ್ತರಿಸಿದ ನ್ಯಾಯಸಮ್ಮತ್ತ ಪ್ರಮಾಣಪತ್ರಗಳಾದ ಪಡಿತರ ಚೀಟಿ/ಜಾತಿ ಪ್ರಮಾಣ ಪತ್ರ/ ಆದಾಯ ಪ್ರಮಾಣ ಪತ್ರದ ಮೂಲಕ ಸಾಕ್ಷಿಕರಿಸಿಕೊಳ್ಳುವುದು. ಯೋಜನೆಯಡಿಯಲ್ಲಿ ಉಚಿತ ಶಿಕ್ಷಣ ಮತ್ತು ವಿದ್ಯಾರ್ಥಿವೇತನದ ಲಾಭ ಪಡೆಯಲು ಜಿಲ್ಲಾ ಶಸ್ತ್ರ ಚಿಕತ್ಸಾ ತಜ್ಞರಿಂದ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗುತ್ತದೆ. ಡಾಟಾಬೇಸ್ ಮತ್ತು ಪ್ರಮಾಣ ಪತ್ರಗಳ ನೈಜತೆ ದೃಢೀಕರಣ ಕಾರ್ಯವನ್ನು ಆಯಾಯಾ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರುಗಳಿಂದ ಕೈಗೊಳ್ಳುವುದು.

**ಯೋಜನೆಯ ಅನುಷ್ಠಾನಕ್ಕಾಗಿ ಎಷ್ಟು ಹಣಕಾಸಿನ ಅನುದಾನಗಳ ಅವಶ್ಯಕತೆಯಿರುತ್ತದೆ?**

ಈ ಯೋಜನೆಯಡಿಯಲ್ಲಿ ವಿದ್ಯಾರ್ಥಿವೇತನ ಹಾಗೂ ಉಚಿತ ಉನ್ನತ ವ್ಯಾಸಂಗಕ್ಕಾಗಿ ಹಣಕಾಸಿನ ಮೊತ್ತವನ್ನು ಹಂಚಿಕೆ ಮಾಡಲಾಗುತ್ತಿದೆ ಮತ್ತು ಯಾವುದೇ ಪುನಾರಾವರ್ತಿತ ವೆಚ್ಚವು ಅಡಕಗೊಂಡಿರುವುದಿಲ್ಲ. ಫಲಾನುಭವಿಗಳ ಉಚಿತ ಶಿಕ್ಷಣ ಮತ್ತು ವಿದ್ಯಾರ್ಥಿವೇತನದ ಅನುಕೂಲತೆಯನ್ನು ವರ್ಷದಿಂದ ವರ್ಷಕ್ಕೆ ಶೈಕ್ಷಣಿಕ ಅವಧಿಯಲ್ಲಿ ಒದಗಿಸಲು ಪುನರಾವರ್ತಿತ ವೆಚ್ಚವನ್ನು ಲೆಕ್ಕಹಾಕುವುದು. ಮತ್ತು ಸದರಿ ವೆಚ್ಚವು ಈ ಯೋಜನೆಯಡಿಯಲ್ಲಿ ಲಾಭಾಂಶ ಪಡೆಯುವ ಅರ್ಹ ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸುವುದು.

ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಕೋರಿಕೆ ಪ್ರಸ್ತಾವನೆ ಪರಿಶೀಲಿಸಿ, ಅಗತ್ಯಕ್ಕೆ ತಕ್ಕಂತೆ ಅನುದಾನ ಬಿಡುಗಡೆ ಮಾಡಲಾಗುವುದು. ಪ್ರಸ್ತುತ ಅರ್ಜಿದಾರರ ಸಂಖ್ಯೆಯನ್ನು ಆಧರಿಸಿ ಮತ್ತು ಹೆಚ್ಚುವರಿಯಾಗಿ ಸೇರ್ಪಡೆಯಾಗುವ ಅರ್ಜಿದಾರರ ಸಂಖ್ಯೆಯನ್ನು ಪರಿಗಣಿಸಿ ಹೆಚ್ಚುವರಿ ಅನುದಾನದ ಪ್ರಸ್ತಾವನೆ ಕಳಿಸಿದಲ್ಲಿ ಪರಿಶೀಲಿಸಿ ಒದಗಿಸಲಾಗುವುದು.

**ಯೋಜನೆ ಅನುಷ್ಠಾನವಾಗುವ ವರ್ಷ**

2013-14 ನೇ ಸಾಲಿಗೆ ಪ್ರಸ್ತುತ ದಾಖಲಾದ ವಿದ್ಯಾರ್ಥಿಗಳಿಗೆ ಮಾತ್ರ ಈ ಯೋಜನೆಯ ಪ್ರಯೋಜನೆಯನ್ನು ಪಡೆಯಬಹುದಾಗಿದೆ.

**ಹಂತ ಹಂತವಾಗಿ ವಿದ್ಯಾರ್ಥಿವೇತನ ಪಡೆಯಲು ಅನುಸರಿಸಬೇಕಾದ ಕ್ರಮಗಳು**

1. ಶಿಷ್ಯವೇತನದ ಪ್ರಯೋಜನ ಪಡೆಯಲು ಬಯಸುವ ವಿದ್ಯಾರ್ಥಿಯು ಸರ್ಕಾರಿ ಅಥವಾ ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿ ಸರ್ಕಾರಿ ಕೋಟಾ ಅಡಿಯಲ್ಲಿ ಪದವಿ ಶಿಕ್ಷಣವನ್ನು ಪಡೆಯಬಹುದಾಗಿದೆ.
2. ಶಿಷ್ಯವೇತನ ಪಡೆಯ ಬಯಸುವ ವಿದ್ಯಾರ್ಥಿಗಳು ಶಿಷ್ಯವೇತನಗಾಗಿಯೇ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ಮತ್ತು ಎಲ್ಲಾ ಈ ಕೆಳಕಂಡ ದಾಖಲಾತಿಗಳನ್ನು ಕಾಲೇಜು ಶಿಕ್ಷಣ ಆಯುಕ್ತರಿಗೆ ಸಲ್ಲಿಸುವುದು.
   ಎ) ಯಾವ ವಿದ್ಯಾರ್ಥಿಗೆ ಅಥವಾ ವಿದ್ಯಾರ್ಥಿಯ ಪೋಷಕರು ಪ್ರಸಕ್ತ ಅಥವಾ ಈ ಹಿಂದೆ ಕುಷ್ಠರೋಗಕ್ಕಾಗಿ ಚಿಕತ್ಸೆ ಪಡೆದ ಸಂದರ್ಭದಲ್ಲಿ ಎಂ.ಡಿ.ಟಿ ಪ್ರಮಾಣ ಪತ್ರವನ್ನು

ಅಥವಾ ಹೆಚ್.ಐ.ವಿಗಾಗಿ ಚಿಕಿತ್ಸೆ ಪಡೆದ ಸಂದರ್ಭದಲ್ಲಿ ಎ.ಆರ್.ಟಿ ಪ್ರಮಾಣ ಪತ್ರವನ್ನು ಪ್ರಸ್ತುತ ಪಡಿಸಬಹುದಾಗಿದೆ.

ಬಿ) ಜನ್ಮದಿನಾಂಕವನ್ನು ಪ್ರಮಾಣೀಕರಿಸಲು ಅರ್ಹ ಪ್ರಾಧಿಕಾರದಿಂದ ಹಂಚಿದ ಜನನ ಪ್ರಮಾಣಪತ್ರದ ನಕಲು ಅಥವಾ ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿಯ ನಕಲುಪ್ರತಿಯನ್ನು ಪಡೆಯಬಹುದಾಗಿದೆ.

ಸಿ) ಪಿ.ಯು.ಸಿ ಅಥವಾ 12ನೇ ತರಗತಿಯ ಅಂಕಪಟ್ಟಿಯ ನಕಲು ಪ್ರತಿ.

ಡಿ) ವ್ಯಕ್ತಿಯ ಜೊತೆಯಲ್ಲಿನ ಸಂಬಂಧವನ್ನು ಪರಿಶೀಲಿಸಲು ಅಥವಾ ಪಡಿತರ ಚೀಟಿಯ ನಕಲು ಪ್ರತಿಯನ್ನು ಅಥವಾ ಪಾಸ್‌ಪೋರ್ಟ್ ನಕಲು ಪ್ರತಿಯನ್ನು ಪಡೆಯಬಹುದಾಗಿದೆ.

ಇ) ದಾಖಲಾತಿ ಪ್ರಮಾಣ ಪತ್ರವನ್ನು ಮತ್ತು ವ್ಯಾಸಂಗ ಪ್ರಮಾಣಪತ್ರವನ್ನು ಆಯಾಯಾ ವಿಶ್ವವಿದ್ಯಾಲಯ/ಕಾಲೇಜು/ಪಾಲಿಟೆಕ್ನಿಕ್ ಪಡೆಯಬಹುದಾಗಿದೆ.

**ಶಿಷ್ಯವೇತನ ಮತ್ತು ಉಚಿತ ಶಿಕ್ಷಣಕ್ಕಾಗಿ ಹಣ**

ಈ ಯೋಜನೆಯಡಿಯಲ್ಲಿ ಫಲಾನುಭವಿಗಳು ಈ ಕೆಳಕಂಡ ಲಾಭಗಳನ್ನು ಪಡೆಯಬಹುದಾಗಿದೆ.

1. ಪ್ರತಿ ತಿಂಗಳು ರೂ.1500 ರಂತೆ 12 ತಿಂಗಳಿಗೆ ಜೀವನೋಪಾಯದ ಭತ್ಯೆಯನ್ನು ನೇರವಾಗಿ ಫಲಾನುಭವಿಗಳಿಗೆ ತಲುಪಿಸುವುದು.
2. ಸರ್ಕಾರಿ/ಸರ್ಕಾರಿ ಅನುದಾನಿತ ಕಾಲೇಜು/ಸರ್ಕಾರಿ ಕೋಟಾ ಅಡಿಯಲ್ಲಿರುವ ಸ್ವಾಯತ್ತತೆ ಹೊಂದಿರುವ ಕಾಲೇಜುಗಳಲ್ಲಿನ ಮನೆಪಾಠದ ಶುಲ್ಕವನ್ನು ಮರುಪಾವತಿಗೊಳಿಸಬಹುದು. ಆದರೆ ಆಡಳಿತಾತ್ಮಕ ಕೋಟಾಯಡಿಯಲ್ಲಿನ ಮನೆಪಾಠದ ಶುಲ್ಕವನ್ನು ಮರುಪಾವತಿಗೊಳಿಸಲು ಬರುವುದಿಲ್ಲ.
3. ಪ್ರತಿ ಅರ್ಹ ವಿದ್ಯಾರ್ಥಿಗೆ ರೂ.3000 ರಂತೆ ಪ್ರತಿ ವರ್ಷ ಶುಲ್ಕಪಾವತಿ/ಬಟ್ಟೆ/ವಸ್ತ್ರ, ಪುಸ್ತಕ ಮತ್ತು ಕಲಿಕೋಪಕರಣಗಳಿಗೆ ನೀಡಬಹುದಾಗಿದೆ.

**ಫಲಾನುಭವಿಗಳ ನೈಜತೆ ಪರಿಶೀಲಿಸುವ ಕ್ರಮ:**

1. ಪೋಷಕರ ಸಂಬಂಧವನ್ನು ವಿದ್ಯಾರ್ಥಿ ಜೊತೆಗೆ ಖಚಿತಪಡಿಸಲು ಎ.ಆರ್.ಟಿ ಚಿಕಿತ್ಸೆ ಪಡೆದ ಪ್ರಮಾಣ ಪತ್ರ ಅಥವಾ ಎಂ.ಡಿ.ಟಿ ಚಿಕಿತ್ಸೆ ಪಡೆದ ಪ್ರಮಾಣ ಪತ್ರವನ್ನು ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರದೊಂದಿಗೆ ಮತ್ತು ಪಡಿತರ ಚೀಟಿಯೊಂದಿಗೆ ಪರಿಶೀಲಿಸುವುದು.
2. ಎಲ್ಲಾ ದಾಖಲಾತಿಗಳ ಪರಿಶೀಲನೆಯನ್ನು ಆಯಾಯಾ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರುಗಳು ಅಲ್ಲಿನ ಜಿಲ್ಲಾ ಆರೋಗ್ಯ ಅಧಿಕಾರಿಗಳಿಂದ/ ಜಿಲ್ಲಾ ಸರ್ಜನ್‌ರವರಿಂದ ಸಲಹೆಯೊಂದಿಗೆ ಪರಿಶೀಲಿಸುವುದು.
3. ಇಲಾಖೆಯ ಮುಖ್ಯಸ್ಥರು ಫಲಾನುಭವಿಗಳ/ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಶಿಷ್ಯವೇತವನ್ನು ಮಂಜೂರು ಮತ್ತು ಬಿಡುಗಡೆಗೊಳಿಸುವ ಮುನ್ನ ವಿದ್ಯಾರ್ಥಿ, ಬ್ಯಾಂಕ್ ಮತ್ತು ಪ್ರಾಂಶುಪಾಲರ ಗಮನಕ್ಕೆ/ತಿಳುವಳಿಕೆಗೆ ತರುವುದು.

**ಶಿಷ್ಯವೇತನ ಮತ್ತು ಉಚಿತ ಶಿಕ್ಷಣ ಮುಂದುವರೆಸಲು**

1. ವಿದ್ಯಾರ್ಥಿಯು ಪ್ರತಿ ವರ್ಷ ಕನಿಷ್ಠ ಒಟ್ಟು ಅಂಕಗಳಲ್ಲಿ ಶೇಕಡಾ 40 ರಷ್ಟು ಅಂಕಗಳೊಂದಿಗೆ ಉತ್ತೀರ್ಣಗೊಳ್ಳಬೇಕು ಮತ್ತು ಯಾವುದೇ ವಿಷಯದಲ್ಲಿ ಅನುತ್ತೀರ್ಣರಾಗಿರಬಾರದು.
2. ಪ್ರತಿ ಸೆಮಿಸ್ಟರ್ ಅಥವಾ ವರ್ಷದ ಅಂತ್ಯದಲ್ಲಿ ವಿದ್ಯಾರ್ಥಿಯು ಕನಿಷ್ಠ ಶೇಕಡಾ 75 ರಷ್ಟು ಹಾಜರಾತಿಯನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳುವುದು.
3. ವಿದ್ಯಾರ್ಥಿಯು ಅಲ್ಪಾವಧಿ ಅಥವಾ ಪೂರ್ಣ ಅವಧಿಯ ನೌಕರಿ ಅಥವಾ ಡಿಪ್ಲೋಮಾ ಅಥವಾ ಪದವಿ ಅಥವಾ ಪ್ರಮಾಣ ಪತ್ರದ ಕೋರ್ಸ್‌ನಲ್ಲಿ ಸೇರಿರಬಾರದು.
4. ವಿದ್ಯಾರ್ಥಿಯು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಇತರೆ ಶಿಷ್ಯವೇತನವನ್ನು ಪಡೆಯಬಾರದು.
5. ಸದರಿ ಯೋಜನೆಯಡಿಯಲ್ಲಿನ ಫಲಾನುಭವಿಯು ಪದವಿ ಪೂರ್ಣಗೊಳಿಸಿ ಅಥವಾ ಡಿಪ್ಲೋಪಮಾ ಅಥವಾ ಯಾವುದೇ ಪ್ರಮಾಣ ಪತ್ರದ ಕೋರ್ಸ್ ಪೂರ್ಣಗೊಳಿಸಿದ ನಂತರ ಕರ್ನಾಟಕ ರಾಜ್ಯದಲ್ಲಿಯೇ ಸ್ನಾತಕೋತ್ತರ ಪದವಿ ಪಡೆಯಬೇಕೆಂದು ಬಯಸುವ ಫಲಾನುಭವಿ ಶಿಷ್ಯವೇತನದ ಲಾಭವನ್ನು ಮುಂದುವರೆಸಬಹುದಾಗಿದೆ.
6. ಸದರಿ ಯೋಜನೆಯಡಿಯಲ್ಲಿ ಒಂದು ಬಾರಿ ಜಿಲ್ಲಾ ಆರೋಗ್ಯ ಅಧಿಕಾರಿಗಳಿಂದ ಫಲಾನ್ನವಿಗಳ ರೋಗದ ಪ್ರಮಾಣವನ್ನು ಪರಿಶೀಲನೆ ಮಾಡಿದ್ದಲ್ಲಿ, ಶಿಷ್ಯವೇತನವನ್ನು ಮುಂದುವರೆಸಲು ವಿದ್ಯಾರ್ಥಿಯು ಪ್ರತಿ ವರ್ಷ ಪ್ರಮಾಣ ಪತ್ರವನ್ನು ಒದಗಿಸುವ ಅವಶ್ಯಕತೆ ಇರುವುದಿಲ್ಲ.

**ಯೋಜನೆಯ ಅನುಷ್ಠಾನಕ್ಕಾಗಿ ನೋಡಲ್ ಅಧಿಕಾರಿ:**

ಪರಿಣಾಮಕಾರಿ ಯೋಜನೆಯ ಅನುಷ್ಠಾನಕ್ಕಾಗಿ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದೆ. ಆಯುಕ್ತರು ಯೋಜನೆಯ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಮತ್ತು ರಾಜ್ಯದ ಆಡಳಿತಾತ್ಮಕ ಕಾನೂನಿನ ಕ್ಷೇತ್ರಕ್ಕೆ ಒಳಪಡುವ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸದರಿ ಯೋಜನೆಯ ಮಾರ್ಗಸೂಚಿ ಹಾಗೂ ಅರ್ಜಿ ನಮೂನೆಗಳು ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಇವರು ಪ್ರಾಂಶುಪಾಲರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಅಪೂರ್ಣ ಪ್ರಚಾರದಿಂದ ಮತ್ತು ಸಮಾಜದಲ್ಲಿ ಕ್ರಮಾನುಗತವಾಗಿ ಸಾರ್ವಜನಿಕರಲ್ಲಿ ಬಳೆದುಬಂದ ನಿಬಂಧನೆಗಳಿಂದ/ಅನರ್ಥಗಳನ್ನು ಹೊರತುಪಡಿಸಿ. ಯೋಜನೆಯ ಲಭಾಂಶಗಳ ಬಗ್ಗೆ ಅರಿವು ಮೂಡಿಸುವುದು. ಸದರಿ ಯೋಜನೆಯ ಅನುಷ್ಠಾನವಾದ ಒಂದು ವರ್ಷದಲ್ಲಿ ಕಮಿಷನರ್‌ರವರು ಈ ಯೋಜನೆಯನ್ನು ಇ-ಪಾಸ್ ಮತ್ತು ಇ-ಗೌರನನ್ಸ್ ಅಡಿಯಲ್ಲಿ ಬರುವಂತೆ ನೋಡಿ ಯೋಜನೆಯ ಪರಿಣಾಮಕಾರಿ ಉತ್ತರದಾಯಿತ್ವ, ಪಾರದರ್ಶಕತೆ ಮತ್ತು ಆಡಳಿತಾತ್ಮಕ ಬೆಳವಣಿಗೆಯನ್ನು ಜಾರಿಗೊಳಿಸಬೇಕು.

ಕಾಲೇಜು ಶಿಕ್ಷಣ, ವಿಶ್ವವಿದ್ಯಾಲಯಗಳು ಮತ್ತು ತಾಂತ್ರಿಕ ಶಿಕ್ಷಣದ ನಿರ್ದೇಶಕರ ಕಛೇರಿಯಿಂದ ಬರುವ ಫಲಾನುಭವಿಗಳಿಗೆ ಕಾಲೇಜು ಶಿಕ್ಷಣ ಆಯುಕ್ತರು ಯೋಜನೆಯ ಅನುಷ್ಠಾನಾಧಿಕಾರಿಯಾಗಿರುತ್ತಾರೆ. ಯೋಜನೆಯ ಅನುಷ್ಠಾನಕ್ಕಾಗಿ ಬೇಕಾಗುವ ಹಣಕಾಸಿನ ಖರ್ಚುವೆಚ್ಚಗಳನ್ನು 2203-00-107-1-00 (ಯೋಜನೆ) ಯಡಿಯಲ್ಲಿನ ಪ್ರಧಾನ ಲೆಕ್ಕ ಶೀರ್ಷಿಕೆಯಿಂದ ಭರಿಸಬಹುದಾಗಿದೆ. ಸದರಿ ವರ್ಷದ ಹಣಕಾಸಿನ ಬೇಡಿಕೆಗಳನ್ನು ಪಡೆದ ಅರ್ಜಿಗಳ ಆಧಾರದ ಮೇಲೆ ಮತ್ತು ಐಚ್ಛಿಕ ಅಭ್ಯರ್ಥಿಗಳ ಪ್ರಮಾಣದ ಪರಿಶೀಲನೆಯ ನಂತರ ನಿರ್ಣಯಿಸುವುದು. ಮುಂದಿನ ವರ್ಷದ ವಾರ್ಷಿಕ ಹಣಕಾಸಿನ ಬೇಡಿಕೆಗಳನ್ನು ಪ್ರಸಕ್ತ ವರ್ಷದ ಫಲಾನುಭವಿಗಳ ಸಂಖ್ಯೆಗಳ ಆಧಾರದ ಮೇಲೆ ಮತ್ತು ಮುಂದಿನ ವರ್ಷದಲ್ಲಿ ನಿರೀಕ್ಷಣೆಮಾಡಬಹುದಾದ ಫಲಾನುಭವಿಗಳ ಸಂಖ್ಯೆಗಳ ಆಧಾರದ ಮೇಲೆ 2014-15ನೇ ಸಾಲಿನ ಆಯವ್ಯಯದಲ್ಲಿ ಕೋರುವುದು.

(ಐ.ಎಫ್. ಮಾಗಿ)
ವಿಶೇಷ ಅಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ ಮತ್ತು ಇ-ಆಡಳಿತ)

ದೂರವಾಣಿ : 080-2287 4039
080-2235 4085
ಫ್ಯಾಕ್ಸ್ : 080-2228 5591

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಆಯುಷ್ ಸೇವೆಗಳು

ಸಂಖ್ಯೆ:NRHM/SPMU/SPM/78/2011-12 ದಿನಾಂಕ: 15/03/2012

**ಸುತ್ತೋಲೆ**

ಕರ್ನಾಟಕ ರಾಜ್ಯದಲ್ಲಿ 49 ಎ.ಆರ್.ಟಿ. ಕೇಂದ್ರಗಳು ಮತ್ತು 140 ಉಪ ಎ.ಆರ್.ಟಿ. ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಹೆಚ್.ಐ.ವಿ. ಸೋಂಕಿತರಿಗೆ ಉಚಿತ ಚಿಕಿತ್ಸೆಯನ್ನು ನೀಡಲಾಗುತ್ತಿವೆ. ನೋಂದಾಣಿಯಾದ ರೋಗಿಗಳಿಗೆ ಉಚಿತವಾಗಿ ಸಂಬಂಧಪಟ್ಟ ಪರೀಕ್ಷೆಗಳನ್ನು ಮತ್ತು ಚಿಕಿತ್ಸೆಯನ್ನು ಸರ್ಕಾರದಿಂದ ಉಚಿತವಾಗಿ ನೀಡಬೇಕಾಗಿರುತ್ತದೆ ಮತ್ತು ರೋಗಿಗಳು ಆಗಾಗ್ಗೆ ಒಳಪಡಬಹುದಾದ ಅವಕಾಶವಾದಿ ಸೋಂಕುಗಳಿಗೆ ಸಂಬಂಧಪಟ್ಟ ಪರೀಕ್ಷೆಗಳನ್ನೂ ಉಚಿತವಾಗಿ ಮಾಡಬೇಕಾಗುತ್ತದೆ.

ಈ ಪರೀಕ್ಷೆಗಳಿಗೆ ಬೇಕಾಗುವ ಕಿಟ್ಸ್ / ರಿಏಜೆಂಟ್ಸ್‌ಗಳು ಯಾವುದೇ ಸಂದರ್ಭದಲ್ಲಿ ಕೊರತೆಯಾಗದಂತೆ ಆಸ್ಪತ್ರೆಯ ಮುಖ್ಯಸ್ಥರು ಅವಶ್ಯಕತೆಗನುಸಾರವಾಗಿ ಆಸ್ಪತ್ರೆಯ ಬಳಕೆದಾರರ ನಿಧಿಯಿಂದ ಖರೀದಿಸಲು ಈ ಮೂಲಕ ಅನುಮತಿ ನೀಡಲಾಗಿದೆ.

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
& ಸೇವೆಗಳು, ಬೆಂಗಳೂರು

ಪ್ರತಿಯನ್ನು :
1 ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ............ ಜಿಲ್ಲೆ
2 ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ............
3. ಆಡಳಿತ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ, Link ART Centre
............
............ ಜಿಲ್ಲೆ

4 [illegible] ............ [illegible]

[illegible] ಬಿಲ್ಡಿಂಗ್, [illegible] - 560 009.

153

## ಕರ್ನಾಟಕ ಸರ್ಕಾರ

ಸಂ.ವಇ/ಆಶ/ಹೆಚ್‌ಎಎಂ/2007

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ 12-03-2007

## ಸುತ್ತೋಲೆ

ವಿಷಯ: ವಿಶೇಷ ವರ್ಗಕ್ಕೆ ಸೇರಿದ ಫಲಾನುಭವಿಗಳನ್ನು ಆಯ್ಕೆ ಮಾಡಲು ಸಮಿತಿಯನ್ನು ರಚಿಸುವ ಬಗ್ಗೆ

ರಾಜೀವ್ ಗಾಂಧಿ ವಸತಿ ನಿಗಮದಿಂದ ಕೆಲವು ವಿಶೇಷ ವರ್ಗಕ್ಕೆ ಸೇರಿರುವ (ಅಂಗವಿಕಲರು, ಕುಷ್ಠರೋಗದಿಂದ ಗುಣಮುಖರಾದವರು, ಮಾಜಿ ಸೈನಿಕರು, ಹೆಚ್‌ಐವಿ +ve ಸೋಂಕಿಗೆ ಒಳಗಾದವರು, ಅರಣ್ಯ ಪ್ರದೇಶದಿಂದ ಹಾಗೂ Tank ಪ್ರದೇಶಗಳ ಅತಿಕ್ರಮಣದಿಂದ ತೆರವುಗೊಳಿಸಲಾದ ನಿರಾಶ್ರಿತರು, ಪ್ರವಾಹ ಪೀಡಿತರು, ದೇವದಾಸಿಯರು ಮತ್ತು ಇತರೆ ದೌರ್ಜನ್ಯಕ್ಕೊಳಗಾದ ಮಹಿಳೆಯರು, ಅಂಗನವಾಡಿ ಕಾರ್ಯಕರ್ತೆಯರು, ಮತೀಯ ಗಲಭೆಗೆ ಹಾಗೂ ಚಳುವಳಿಗಳಿಂದ ಹಾನಿಗೊಳಗಾದವರು, ನೇಕಾರರು, ಹಮಾಲರು, ಬೀಡಿ ಕಾರ್ಮಿಕರು ಹಾಗೂ ಕುಶಲಕರ್ಮಿಗಳು).

ಈ ವಿಶೇಷ ವರ್ಗದ ಫಲಾನುಭವಿಗಳ ಆಯ್ಕೆಗೆ ಹಾಗೂ ಯೋಜನಾ ಅನುಷ್ಠಾನಕ್ಕೆ ಒಂದು ವಿಶೇಷ ಪ್ರಕ್ರಿಯೆ ಬೇಕಾಗಿರುತ್ತದೆ.

ರಾಜೀವ್ ಗಾಂಧಿ ವಸತಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ವಿಶೇಷ ವರ್ಗಕ್ಕೆ ಸೇರಿದ ಫಲಾನುಭವಿಗಳ ವಿವರಗಳನ್ನು ಈ ಕೆಳಕಂಡ ಇಲಾಖೆಗಳು ತಯಾರಿಸಿ ಸದರಿ ಫಲಾನುಭವಿಯಾದಿಯನ್ನು ಗ್ರಾಮ ಪಂಚಾಯಿತಿ ಅಥವಾ ಪಟ್ಟಣ ಪಂಚಾಯಿತಿ/ಪುರಸಭೆ/ನಗರಸಭೆಗಳಿಗೆ ಒದಗಿಸಿ ಯೋಜನೆಯ ಮಾರ್ಗಸೂಚಿಯ ಪ್ರಕಾರ ಅರ್ಹತೆಯನ್ನು ಅವರುಗಳಿಂದ ದೃಢೀಕರಿಸಿ ಜಿಲ್ಲಾ ಮಟ್ಟದ ಸಮಿತಿ ಮುಂದೆ ಇಡತಕ್ಕದ್ದು.

| ಕ್ರ. ಸಂ. | ವಿಶೇಷ ವರ್ಗ | ಫಲಾನುಭವಿಗಳ ವಿವರಗಳನ್ನು ಒದಗಿಸುವ ಇಲಾಖೆಯ ಅಧಿಕಾರಿಗಳು |
|---|---|---|
| 1. | ಅಂಗವಿಕಲರು | ಅಂಗವಿಕಲರ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ |
| 2. | ಕುಷ್ಠರೋಗದಿಂದ ಗುಣಮುಖರಾದವರು | ಆರೋಗ್ಯ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ |
| 3. | ಮಾಜಿ ಸೈನಿಕರು | ಜಿಲ್ಲಾ ಮಟ್ಟದ ಅಧಿಕಾರಿ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ |
| 4. | ಹೆಚ್‌ಐವಿ +ve ಸೋಂಕಿಗೆ ಒಳಗಾದವರು | ಜಿಲ್ಲಾ ಆರೋಗ್ಯ ಅಧಿಕಾರಿ, ಆರೋಗ್ಯ ಇಲಾಖೆ |
| 5. | ಅರಣ್ಯ ಪ್ರದೇಶದಿಂದ ಹಾಗೂ Tank ಪ್ರದೇಶಗಳ ಅತಿಕ್ರಮಣದಿಂದ ತೆರವುಗೊಳಿಸಲಾದ ನಿರಾಶ್ರಿತರು | ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ ಹಾಗೂ ತಹಶೀಲ್ದಾರ್, ಕಂದಾಯ ಇಲಾಖೆ |
| 6. | ಪ್ರವಾಹ ಪೀಡಿತರು | ತಹಶೀಲ್ದಾರ್, ಕಂದಾಯ ಇಲಾಖೆ |
| 7. | ದೇವದಾಸಿಯರು ಮತ್ತು ಇತರೆ ದೌರ್ಜನ್ಯಕ್ಕೊಳಗಾದ ಮಹಿಳೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರು | ಜಿಲ್ಲಾ ಮಟ್ಟದ ಅಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ |
| 8. | ದೌರ್ಜನ್ಯಕ್ಕೆ ಒಳಗಾದವರು | ಜಿಲ್ಲಾ ಮಟ್ಟದ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆ |
| 9. | ಮತೀಯ ಗಲಭೆಗೆ ಹಾಗೂ ಚಳವಳಿಗಳಿಂದ ಹಾನಿಗೊಳಗಾದವರು | ತಹಶೀಲ್ದಾರ್, ಕಂದಾಯ ಇಲಾಖೆ |
| 10. | ನೇಕಾರರು, ಹಮಾಲರು, ಬೀಡಿ ಕಾರ್ಮಿಕರು ಹಾಗೂ ಕುಶಲಕರ್ಮಿಗಳು ಇತ್ಯಾದಿ | ಸಂಬಂಧಪಟ್ಟ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ |

ಸಂಬಂಧಪಟ್ಟ ಜಿಲ್ಲಾ ಮಟ್ಟದ ಇಲಾಖಾಧಿಕಾರಿಗಳು ಫಲಾನುಭವಿಗಳು ವಿಶೇಷ ಗುಂಪಿಗೆ ಸೇರಿರುವುದನ್ನು ಪರಿಶೀಲಿಸಿ ವಿವರಗಳನ್ನು ಸಮಿತಿಗೆ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಫಲಾನುಭವಿಗಳ ವಾಸ್ತವ್ಯ ಆಧಾರ ಹಾಗೂ ಈಗಾಗಲೇ ಯಾವುದೇ ಯೋಜನೆಯಲ್ಲಿ ಮನೆಯನ್ನು ಪಡೆಯದೇ ಇರುವ ಬಗ್ಗೆ ಪರಿಶೀಲಿಸಿ ವಿವರಗಳನ್ನು ಸಮಿತಿಗೆ ಸಲ್ಲಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಸದರಿ ಜಿಲ್ಲಾ ಮಟ್ಟದ ಸಮಿತಿಗಳು ಈ ಕೆಳಕಂಡ ಸದಸ್ಯರನ್ನು ಹೊಂದಿರತಕ್ಕದ್ದು.

| | |
|---|---|
| ❖ ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| ❖ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಉಪಾಧ್ಯಕ್ಷರು |
| ❖ ಜಿಲ್ಲಾ ಆರೋಗ್ಯಾಧಿಕಾರಿಗಳು | ಸದಸ್ಯರು |
| ❖ ಸಂಬಂಧಪಟ್ಟ ಜಿಲ್ಲೆಯ ಇಲಾಖಾ ಮುಖ್ಯಸ್ಥರು | " |
| ❖ ವಿಶೇಷ ವರ್ಗದವರ ಒಳಿತಿಗಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳು (2 ಸರ್ಕಾರೇತರ ಸಂಸ್ಥೆಗಳನ್ನು ಜಿಲ್ಲಾಧಿಕಾರಿಗಳು ಆಯ್ಕೆ ಮಾಡತಕ್ಕದ್ದು) | " |
| ❖ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು | " |
| ❖ ಜಿಲ್ಲೆಯ ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು | " |
| ❖ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಸರಬರಾಜು ಕಂಪನಿ | " |
| ❖ ಆಯಾ ತಾಲ್ಲೂಕಿನ ತಹಶೀಲ್ದಾರರು | " |
| ❖ ಆಯಾ ತಾಲ್ಲೂಕಿನ ಕಾರ್ಯನಿರ್ವಾಹಣಾಧಿಕಾರಿಗಳು | " |
| ❖ ಸಂಬಂಧಪಟ್ಟ ಪಟ್ಟಣದ ಆಯುಕ್ತರು/ಮುಖ್ಯಾಧಿಕಾರಿಗಳು | " |
| ❖ ಜಿಲ್ಲಾ ಮಟ್ಟದಲ್ಲಿ ವಸತಿ ಇಲಾಖೆಗಳ ಮೇಲುಸ್ತುವಾರಿ ವಹಿಸುತ್ತಿರುವ ಜಿಲ್ಲಾ ಪಂಚಾಯತಿಯ ನೋಡಲ್ ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

ಈ ರೀತಿಯಲ್ಲಿ ಫಲಾನುಭವಿಗಳ ಪಟ್ಟಿ ಹಾಗೂ ಫಲಾನುಭವಿಗಳ ಅರ್ಹತೆಯ ಬಗ್ಗೆ ವಿವರಗಳನ್ನು ಪಡೆದು ಈ ವಿಶೇಷ ವರ್ಗಕ್ಕೆ ಹೊರಡಿಸಲಾದ ಸೂಚನೆಗಳನ್ವಯ ಫಲಾನುಭವಿಗಳ ಪಟ್ಟಿಗೆ ಜಿಲ್ಲಾ ಮಟ್ಟದ ಸಮಿತಿಯು ಅನುಮೋದನೆ ನೀಡತಕ್ಕದ್ದು.

ಸಮಿತಿಯಿಂದ ಅನುಮೋದನೆಗೊಂಡ ಫಲಾನುಭವಿಗಳ ಪಟ್ಟಿಯನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಕಳುಹಿಸಿ ಯೋಜನೆಯ ಅನುಷ್ಠಾನಕ್ಕೆ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಯೋಜನೆಯ ಅನುಷ್ಠಾನದ ಸಲುವಾಗಿ ಕಾಲಕಾಲಕ್ಕೆ ನಿಗಮದವರು ಸೂಕ್ತವಾದ ಸೂಚನೆಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಮತ್ತು ಜಿಲ್ಲಾ ಸಮಿತಿಗಳಿಗೆ ಹೊರಡಿಸುವುದು.

ನಿಗಮದಿಂದ ಹೊರಡಿಸಲಾಗುವ ಸೂಚನೆಗಳಿಗೆ ಅನುಗುಣವಾಗಿಯೇ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ಹಾಗೂ ಇಲಾಖೆಗಳು ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

(ರಂಗಮ್ಮ)
ಶಾಖಾಧಿಕಾರಿ-2
ವಸತಿ ಇಲಾಖೆ.

ಗೆ,
ಎಲ್ಲಾ ಜಿಲ್ಲಾಧಿಕಾರಿಗಳು
ಎಲ್ಲಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು.